# ಹೇಮಚಂದ್ರ

ಎಸ್.ಬಿ. ವಸಂತರಾಜಯ್ಯ



ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಕಲಿಕಾಲ ಸರ್ವಜ್ಞ

# ಹೇಮಚಂದ್ರ

ಎಸ್. ಬಿ. ವಸಂತರಾಜಯ್ಯ
ಲೇಖಕರು

ಡಾ|| ಎಂ. ಎ. ಜಯಚಂದ್ರ
ಪ್ರಧಾನ ಸಂಪಾದಕರು

ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಬೆಂಗಳೂರು - 2

# KALIKALA SARVAGNA *HEMACHANDRA*

written by
**S.B. Vasantharajaiah**

First Print 2005

© Author

Pages (x + 25) Price : Rs. 10/-

Copies : 2000

**ISBN : 181-7713-183-4**

Published by
**N. Tippeswamy**
Administrative Officer
Kannada Pustaka Pradikara
Kannada Bhavan
J.C. Road, Bangalore - 560 002

D.T.P.
**Sree Lakshmi Enterprises**
Bangalore - 560 078

Printer :

**Sreeranga Printers Pvt Ltd**
517, Samudra Gupta Maurya Road,
Bhavaninagar, Bangalore- 19
Ph : 2667 9333, 2652 4757

# ಮುನ್ನುಡಿ

ಅಹಿಂಸೆಯ ಆರಾಧಕರಾಗಿದ್ದ ಮಹಾತ್ಮ ಗಾಂಧೀಜಿಯವರು ಹುಟ್ಟಿದ ಗುಜರಾತ್ ರಾಜ್ಯದಲ್ಲಿ ೧೨ನೆಯ ಶತಮಾನದಿಂದ ಗಾಢವಾಗಿ ಅಹಿಂಸೆ, ಸರ್ವಧರ್ಮ ಸಹಿಷ್ಣುತೆಯ ವಾತಾವರಣ ಆವರಿಸಲು ಕಾರಣರಾದವರು ಆಚಾರ್ಯ ಹೇಮಚಂದ್ರರು. ಇವರ ಜನನ ಕ್ರಿ.ಶ. ೧೦೮೯ ರಲ್ಲಿ, ೮ನೇ ವಯಸ್ಸಿನಲ್ಲಿ ದೀಕ್ಷೆ, ೨೧ನೇ ವಯಸ್ಸಿನಲ್ಲಿ ಸಮಸ್ತ ಶಾಸ್ತ್ರ ವಿಶಾರದ. ಕ್ರಿ.ಶ. ೧೧೦೯ ರಲ್ಲಿ ಸೂರಿ ಪದವಿ. ಕ್ರಿ.ಶ. ೧೧೭೩ ರಲ್ಲಿ ತಮ್ಮ ೮೪ನೇ ವಯಸ್ಸಿನಲ್ಲಿ ಕಾಲವಶರಾದರು.

ಗುಜರಾತಿನಲ್ಲಿ ೪೮ ವರ್ಷಗಳಷ್ಟು ದೀರ್ಘಕಾಲ ಆದರ್ಶರಾಜನಾಗಿ ಆಡಳಿತ ನಡೆಸಿದ ಸಿದ್ಧರಾಜ ಜಯಸಿಂಹನಿಗೆ, ಆತನ ನಂತರ ಪಟ್ಟಾಭಿಷಿಕ್ತನಾದ ಕುಮಾರಪಾಲನಿಗೆ ರಾಜಗುರುವಾಗಿ ಇವರು ಮಾರ್ಗದರ್ಶನ ಮಾಡಿದರು. ಇವರ ಕಾಲದಲ್ಲಿ ಅಹಿಂಸೆ ಕೇವಲ ಮನುಷ್ಯರಿಗೆ ಮಾತ್ರವಲ್ಲ, ಮೂಕ ಪ್ರಾಣಿಗಳಿಗೂ ಅನ್ವಯಿಸುತ್ತಿತ್ತು. ವರ್ಷದಲ್ಲಿ ೮೦ ದಿನಗಳು ಪ್ರಾಣವಧೆ ನಿಷೇಧವಿರುತ್ತಿತ್ತು. ಅದ್ವಿತೀಯರಾದ ಈ ರಾಜದ್ವಯರ ಆಡಳಿತದಲ್ಲಿ ಅಹಿಂಸೆ ಪ್ರಜೆಗಳ ಹಾಗೂ ಪ್ರಜಾಪಾಲಕರ ಆಚಾರ ವಿಚಾರಗಳಲ್ಲಿ ನೆಲೆಯೂರಲು ಕಾರಣಕರ್ತರಾಗಿದ್ದವರು ಆಚಾರ್ಯ ಹೇಮಚಂದ್ರರು.

ಇವರು ತ್ರಿಷಷ್ಟಿಶಲಾಕಾಪುರುಷ ಚರಿತೆ, ಶಬ್ದಾನುಶಾಸನ, ಛಂದೋನುಶಾಸನ, ಕಾವ್ಯಾನುಶಾಸನ ಮೊದಲಾದ ಪುರಾಣ, ಕಾವ್ಯ, ದರ್ಶನ,

ಸ್ತೋತ್ರ, ಅಲಂಕಾರಾದಿ ವಿಷಯಗಳಲ್ಲಿ, ೨೫ ಕೃತಿಗಳಲ್ಲಿ, ಎರಡು ಲಕ್ಷ ಶ್ಲೋಕ ಪ್ರಮಾಣದ ಸಾಹಿತ್ಯವನ್ನು ರಚಿಸಿ 'ಕಲಿಕಾಲ ಸರ್ವಜ್ಞ'ರೆನಿಸಿಕೊಂಡಿದ್ದಾರೆ.

ಅಹಿಂಸಾ ಪ್ರಧಾನವಾದ ಜೈನಧರ್ಮದ ತತ್ವಗಳು, ಗ್ರಂಥಗಳು, ಆಚಾರ್ಯರು ಹಾಗೂ ಮಹಾನ್ ವ್ಯಕ್ತಿಗಳನ್ನು ಶ್ರೀ ಸಾಮಾನ್ಯರಿಗೆ ಪರಿಚಯಿಸಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ ಮಹೋತ್ಸವದ ರಾಜ್ಯಸಮಿತಿಯ ಅಧ್ಯಕ್ಷರಾದ ಹಾಗೂ ಗೃಹಸಚಿವರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರ ಸದಾಶಯಕ್ಕನುಸಾರವಾಗಿ ಪ್ರಕಟಣಾ ಸಮಿತಿಯು 'ಕಲಿಕಾಲ ಸರ್ವಜ್ಞ ಹೇಮಚಂದ್ರ'ನ ಬಗ್ಗೆ ಕಿರುಪುಸ್ತಕ ಬರೆಸಲು ನಿರ್ಧರಿಸಿತು. ಸಮಿತಿಯ ಕರೆಗೆ ಓಗೊಟ್ಟು ಬರಹಗಾರರೂ ಸಂಘಟನಾಕಾರರೂ ಸಜ್ಜನರೂ ಆಗಿರುವ ಶ್ರೀ ಎಸ್.ಬಿ. ವಸಂತರಾಜಯ್ಯನವರು ಮಾಹಿತಿಪೂರ್ಣವಾದ ಕಿರುಹೊತ್ತಗೆಯನ್ನು ಸಿದ್ಧಪಡಿಸಿ ಕೊಟ್ಟಿರುತ್ತಾರೆ. ಅವರಿಗೆ ಪ್ರಕಟಣಾ ಸಮಿತಿಯು ಆಭಾರಿಯಾಗಿದೆ.

ಡಾ| ಎಂ.ಎ. ಜಯಚಂದ್ರ
ಅಧ್ಯಕ್ಷರು
ಭಗವಾನ್ ಮಹಾವೀರರ ೨೬೦೦ನೆಯ ಜನ್ಮಕಲ್ಯಾಣ
ಮಹೋತ್ಸವದ ಪ್ರಕಟಣಾ ಸಮಿತಿ, ಬೆಂಗಳೂರು.

## ಒಂದು ದಿನ ಒಳಕೊಂಡಿತ್ತು ನೋಡಾ

ನಮ್ಮ ಕಣ್ಣೆದುರಿಗೆ ಎರಡು ವಾಸ್ತವಗಳಿವೆ. ಒಂದು - ಜನಾಂಗಿಕ ಸಂಸ್ಕೃತಿಯ ಸ್ಮೃತಿ ಸಂಚಯಗಳಂತಿರುವ ಜನಪದ ಪುರಾಣ ಕಥನಗಳನ್ನು ತಲೆಮಾರಿನಿಂದ ತಲೆಮಾರಿಗೆ ಬಾಯಿಯಿಂದ ಬಾಯಿಗೆ ನೆನಪಿನ ವಾಹಕದಲ್ಲಿ ಸೃಜನಶೀಲವಾಗಿ ಕಾಪಾಡಿಕೊಂಡು ಬಂದ ಮೌಖಿಕ ಜಗತ್ತು. ಇದು ಈಗಾಗಲೇ ನಮ್ಮ ನಡುವೆ ಕಣ್ಮರೆಯಾಗುತ್ತಿರುವ ಜಗತ್ತು. ಇನ್ನೊಂದು - ಬದುಕಿನ ಎಲ್ಲ ಜ್ಞಾನಶಾಖೆಗಳ ಮಾಹಿತಿ ಭಂಡಾರವನ್ನೂ ತನ್ನ ಸೂಕ್ಷ್ಮಾಂಶದಲ್ಲಿ ದಾಖಲಿಸಿ ಕೊಳ್ಳುತ್ತಾ, ಮನುಷ್ಯನ ಸೃಜನಶ್ರಮದ ಕಾಲದೀರ್ಘತೆಯನ್ನು ತನ್ನ ಅಣುಕ್ಷಣಗಳ ಹ್ರಸ್ವತೆಗೆ ತಂದಿಟ್ಟುಕೊಂಡು ಧ್ಯಾನ ಸಾಧನೆಯನ್ನು ಮರೆಯುತ್ತಿರುವ ಗಣಕ ಜಗತ್ತು. ಇದು ದಿನದಿಂದ ದಿನಕ್ಕೆ ಗಣನೆಗೆ ಸಿಗದ ವೇಗದಲ್ಲಿ ಚಲಿಸುತ್ತಿರುವ ಜ್ಞಾನ ಜಗತ್ತು.

ಮೌಖಿಕ ಸೃಜನ ಪ್ರತಿಭೆಯ ಪ್ರತೀಕ ಸಿರಿಯಜ್ಜಿ. ಗಣಕ ಜ್ಞಾನದ ವೇಗದ ಪ್ರತೀಕ ಶಕುಂತಲಾದೇವಿ. ಸಿರಿಯಜ್ಜಿಯದು ಕೇವಲ ನೆನಪಲ್ಲ ; ಅದೊಂದು ಸೃಜನ ಪ್ರತಿಭೆ. ಅದು ಭೂತವಲ್ಲ, ವರ್ತಮಾನ. ಪರಂಪರೆಯನ್ನು ಅರಗಿಸಿ ಕೊಂಡ ಸಮಕಾಲೀನವಾದ ಸೃಜನೆ. ಅದು ಕೇವಲ ವ್ಯಕ್ತಿಯಲ್ಲ , ಅದೊಂದು ಸಮುದಾಯ ಪ್ರಜ್ಞೆ. ಶಕುಂತಲಾದೇವಿಯವರ ಜ್ಞಾನಶಕ್ತಿ ೨ + ೨ = ೪ ರ ಲೆಕ್ಕಾಚಾರದ ಅಗಾಧ ನೆನಪಿನ ಕೋಶ. ಇದು ತಾಂತ್ರಿಕ ನೈಪುಣ್ಯತೆ ಹಾಗೂ ಪರಿಕಲ್ಪನೆಗಳ ಅದ್ಭುತ ಸಮೀಕರಣದ ಜ್ಞಾನಶಕ್ತಿ. ಇಲ್ಲಿ ಪರಿಭಾವಿಸಬೇಕಾದ ಬಹು ಮುಖ್ಯ ವಿಚಾರವೆಂದರೆ, ಮೊದಲನೆಯದು ಭಾವಪ್ರಭೆಯ ಸೃಜನೆಯ ಫಲ. ಎರಡನೆಯದು ಬುದ್ಧಿ ಸಂಚಯದ ತರ್ಕದ ಫಲ. ಇಂದು ಈ ಎರಡು ವಾಸ್ತವಗಳ ನಡುವೆ ಅಕ್ಷರ ಲೋಕದ ಚಲನೆ ಹಲವು ಸವಾಲುಗಳಿಗೆ ಹಲವು ಬಿಕ್ಕಟ್ಟುಗಳಿಗೆ ಮುಖಾಮುಖಿಯಾಗಿದೆ.

ಜ್ಞಾನದ ಶೋಧ ವಿಸ್ತರಣಗೊಂಡಂತೆ, ಬಹಳಷ್ಟು ಆತಂಕಗಳು ನಿತ್ಯದ ಭಯಗಳಾಗಿ ನಮ್ಮೆದುರು ಬಿಚ್ಚಿಕೊಳ್ಳುತ್ತಿವೆ. ಮಾಹಿತಿ ತಂತ್ರಜ್ಞಾನದ ವೇಗದಾಳಿಗೆ ಸಿಲುಕಿ ಜಗತ್ತಿನ ಬಹುತೇಕ ಭಾಷೆಗಳು ಕಣ್ಮರೆಯಾಗುವ ಆತಂಕವನ್ನು ಹಲವು ಜನ ಭಾಷಾತಜ್ಞರು ಗಂಭೀರ ಸಮಸ್ಯೆಯಾಗಿ ಜಗತ್ತಿನ ಮುಂದಿಟ್ಟಿದ್ದಾರೆ.

ಈ ಆತಂಕದ ಆವರಣದಲ್ಲಿ ನಮ್ಮ ಕನ್ನಡ ಭಾಷೆಯ ಸ್ಥಿತಿ ಏನು? ಇದು ನಾವು ಕೇಳಿಕೊಳ್ಳಬೇಕಾದ ಪ್ರಮುಖ ಪ್ರಶ್ನೆ. ಭಾಷೆ ಎಂಬುದು ಕೇವಲ ಸಂವಹನ ಸಂಕೇತವಲ್ಲ. ಅದು ಸಮುದಾಯದ ಸಂಸ್ಕೃತಿ, ನಾಗರಿಕತೆ, ಸೃಜನಶಕ್ತಿ, ಬುದ್ಧಿ ಭಾವಗಳು ಸಂಲಗ್ನಗೊಂಡ ಬದುಕಿನ ಪ್ರತೀಕ. ಅದು ಸಮುದಾಯದ ಉಸಿರು. ಇಂಥ ಭಾಷೆಯ ಅಳಿಯುವಿಕೆ ಎಂದರೆ ಬದುಕಿನ ಎಲ್ಲ ಕ್ಷೇತ್ರಗಳ ಪ್ರಮುಖ ವ್ಯಾವಹಾರಿಕತೆಯಿಂದ ಆ ಭಾಷೆಯನ್ನು ಹೊರಗಿಡುವುದು; ಆಡಳಿತ ಶಿಕ್ಷಣ ಸಂಪರ್ಕ ಮಾಧ್ಯಮ ಸ್ಥಾನದಿಂದ ಆ ಭಾಷೆಯನ್ನು ಕಣ್ಮರೆ ಮಾಡುವುದು. ಇದರ ಅರ್ಥ – ಬಹುದೊಡ್ಡ ಭಾಷಿಕ ಸಮುದಾಯವೊಂದನ್ನು ಜ್ಞಾನದ ಬೆಳಕಿನಿಂದ ದೂರವಿಡುವುದು. ಜಾಗತಿಕ ಬದುಕಿನ ಸುಖ ಸವಲತ್ತುಗಳಿಂದ ವಂಚಿಸುವುದು. ಇಂಥ ಹಲವು ಆಘಾತಕಾರೀ ಆತಂಕಗಳ ವಾತಾವರಣದಲ್ಲಿ ಇಂದು ಕನ್ನಡ ಅಕ್ಷರ ಲೋಕ ತನ್ನ ಗತಿಯನ್ನು ಕಂಡುಕೊಳ್ಳಬೇಕಾಗಿದೆ.

ಸಾವಿರಾರು ವರ್ಷಗಳ ಇತಿಹಾಸದಲ್ಲಿ ಸಾಂಸ್ಕೃತಿಕ, ರಾಜಕೀಯ ದಬ್ಬಾಳಿಕೆಯನ್ನು ಸಮರ್ಥವಾಗಿ ಎದುರಿಸಿ ಬೆಳೆದು ಬಂದ ಕನ್ನಡ ಭಾಷೆಗೆ, ಕನ್ನಡ ಬದುಕಿಗೆ ಆತಂಕ ಆಘಾತಗಳು ಮೈಯುಂಡ ಬಾಳು. ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳಿಂದ ಮೊದಲ್ಗೊಂಡು ಹಿತಮಿತ ಮೃದುವಚನ, ನುಡಿ ಟಠಡಢಣ, ಮಾತು ಜ್ಯೋತಿರ್ಲಿಂಗ, ಹಲಗೆ ಬಳಪವ ಪಿಡಿಯದೊಂದಗ್ಗಳಿಕೆಯಲ್ಲಿ ಒಲಿದಂತೆ ಹಾಡಿದ ಹಲವು ಕಾಲದ ಹಲವು ನಿಟ್ಟಿನ ನುಡಿಸಾಧಕರ ಮಾರ್ಗದೇಶಿಗಳ ಸಮಾಹಿತದಲ್ಲಿ ತನಗೆದುರಾದ ಆತಂಕ ಆಘಾತಗಳನ್ನು ಅರಗಿಸಿಕೊಂಡು ಕನ್ನಡದ ದೀಪ ಬೆಳಗಿದೆ. ಇದರರ್ಥ ಆಯಾ ಕಾಲದ ಕನ್ನಡ ಸಮುದಾಯ ತನ್ನ ಕಾಲದ ಸವಾಲುಗಳಿಗೆ ತಕ್ಕ ವಿವೇಕ ತೋರಿ ಸೃಜನಶೀಲವಾಗಿದೆ. ಆದರೆ, ಇಂದಿನ ಆತಂಕ, ಹಿಂದೆಂದಿನ ಆಕ್ರಮಣಗಳಿಗಿಂತ ಭಯಾನಕವಾದುದು. ಈ ಭಯಾನಕತೆಯನ್ನು ಎದುರಿಸುವ ಹಾಗೂ ಆರೋಗ್ಯಕರವಾಗಿ ಅದನ್ನು ಅರಗಿಸಿಕೊಂಡು ಬೆಳೆಯುವ ಸತ್ವಶಕ್ತಿ ಭಾಷೆಗಿದ್ದರೂ, ಭಾಷಿಕ ಸಮುದಾಯದ ಇಚ್ಛಾಶಕ್ತಿಯ ಕೊರತೆ ಎದ್ದುಕಾಣುವ ಸಂಗತಿ. ಈ ಇಚ್ಛಾಶಕ್ತಿ ಹೊರಗಿನಿಂದ ಆಮದು ಮಾಡಿಕೊಳ್ಳುವ ಸರಕಲ್ಲ; ಬದುಕನ್ನು ರೂಪಿಸುವ ಪ್ರಭುತ್ವ ಹಾಗೂ ಪ್ರಭುತ್ವವನ್ನು ಆಯ್ಕೆ ಮಾಡಿಕೊಳ್ಳುವ ಜನಸಮುದಾಯದೊಳಗೆ ಅರಿವೇ ಗುರುವಾಗಿ ಮೂಡಬೇಕಾದ ಪ್ರಜ್ಞಾವಿಶೇಷ. ಈ ಪ್ರಜ್ಞಾ ವಿಶೇಷ ಸಿರಿಯಚ್ಚಿಯ ಸಮುದಾಯವನ್ನು ಕಡೆಗಣಿಸದೆ ಸಮೀಕರಣದ ಜ್ಞಾನಶಕ್ತಿಗೆ ಮಣೆ ಹಾಕಬೇಕಿದೆ.

ಸಾಮಾಜಿಕ ನ್ಯಾಯವನ್ನು ಸಂಸ್ಕೃತಿಯ ರುಚಿ ವಿಶೇಷತೆಯನ್ನು ಪರಿಭಾವನೆಗೆ ತಂದುಕೊಂಡು ಜಂಗಮಶೀಲವಾಗಬೇಕಿದೆ. ಅತಿರೇಕಗಳ ಅವಾಂತರದಿಂದ ಸಮುದಾಯವನ್ನು ಕಾಪಾಡುವ ಶಕ್ತಿ ಅಕ್ಷರ ಲೋಕಕ್ಕಿದೆ. ಆದ್ದರಿಂದ ಅಕ್ಷರ ಲೋಕ ಸೃಜನಶೀಲತೆಯನ್ನು ಎಚ್ಚರದಿಂದ ಉಳಿಸಿಕೊಳ್ಳುತ್ತಾ, ಜ್ಞಾನದ ಹೊಸ ವಿಸ್ತರಣೆಗೆ ತೆರೆದುಕೊಳ್ಳುವ ಅಗತ್ಯವಿದೆ.

ವಿಜ್ಞಾನದ ಹೊಸ ಹೊಸ ಆವಿಷ್ಕಾರಗಳಿಗೆ ಪ್ರತಿಸ್ಪಂದಿಸುತ್ತಾ ಬೆಳೆಯುವ ಭಾಷೆಯ ಸೃಜನಶೀಲತೆ ಪ್ರಕಾಶಿಸುತ್ತದೆ. ವೈಜ್ಞಾನಿಕ ವಿಚಾರ ಸೃಜನಶೀಲ ಭಾವದಲ್ಲಿ ಅಭಿವ್ಯಕ್ತಗೊಂಡಾಗ ಅದಕ್ಕೊಂದು ಮಾನವೀಯತೆಯ ಪ್ರಭೆ ಪ್ರಾಪ್ತವಾಗುತ್ತದೆ. ಹೊಸಕಾಲದ ಸಂವೇದನೆಗಳಿಗೆ ವೈಜ್ಞಾನಿಕ ವಿಚಾರಗಳಿಗೆ ತಾತ್ವಿಕ ತರ್ಕದೀಪ್ತಿಗಳಿಗೆ ತೆರೆದುಕೊಳ್ಳುವ ನಮ್ಯಗುಣ ಜೀವಂತ ಭಾಷೆಯೊಂದರ ದೊಡ್ಡಶಕ್ತಿ. ಕಾಲದ ಅಗತ್ಯಗಳಿಗೆ ಸ್ಪಂದಿಸಬಲ್ಲ ನಮ್ಯಗುಣ ಕನ್ನಡ ಭಾಷೆಯ ದೊಡ್ಡ ಶಕ್ತಿ. ಜಾಗತಿಕ ಮಟ್ಟದಲ್ಲಿ ವಿಸ್ತರಣೆಗೊಳ್ಳುತ್ತಿರುವ ಎಲ್ಲ ಜ್ಞಾನಶಾಖೆಗಳ ಪರಿಭಾಷಿಕ ಶಬ್ದ ಸಂಪತ್ತನ್ನು ಸ್ವೀಕರಿಸುತ್ತಾ, ತನ್ಮೂಲಕ ವಿಷಯಜ್ಞಾನವನ್ನು ಅರಗಿಸಿಕೊಂಡು ಕನ್ನಡ ಭಾಷೆ ಬೆಳೆಯಬೇಕಿದೆ. ಕನ್ನಡ ಜ್ಞಾನಚೇತನಗಳ ಇಚ್ಛಾಶಕ್ತಿ ಈ ದಿಸೆಯಲ್ಲಿ ಹೆಚ್ಚು ಕ್ರಿಯಾಶೀಲವಾಗಬೇಕಾದ ಅಗತ್ಯವಿದೆ. ಅಲ್ಲಮನ ಒಂದು ವಚನ ಹೀಗಿದೆ.

> ಹಿಂದಣ ಅನಂತವನು ಮುಂದಣ ಅನಂತವನು
> ಒಂದು ದಿನ ಒಳಕೊಂಡಿತ್ತು ನೋಡಾ
> ಒಂದು ದಿನವನೊಳಕೊಂಡು ಮಾತಾಡುವ ಮಹಾಂತನ
> ಕಂಡು ಬಲ್ಲವರಾರಯ್ಯ
> ಆದ್ಯರು ವೇದ್ಯರು ಅನಂತ ಹಿರಿಯರು ಕಾಲದಂತುವನರಿಯದೆ
> ಅಂತೆ ಹೋದರು ಕಾಣಾ ಗುಹೇಶ್ವರ.

ಜಗತ್ತಿನ ಜ್ಞಾನಕ್ಕೆ ಹಿಂದಣ ಪರಂಪರೆಯ ಅಪಾರತೆ ಇದೆ. ಮುಂದಣ ಭವಿಷ್ಯದ ಅನಂತತೆ ಇದೆ. ವರ್ತಮಾನದಲ್ಲಿ ಈ ಎರಡೂ ಸಂಲಗ್ನಗೊಂಡ ಭಾವದಲ್ಲಿ ಸೃಜನಶೀಲವಾದಾಗ ಅದು ಅಳಿಯದ ಮಾತಾಗುತ್ತದೆ. ಆ ಮಾತು ಜ್ಯೋತಿರ್ಲಿಂಗ ರೂಪಿಯಾಗುತ್ತದೆ. ನಿಜವಾದ ಪುಸ್ತಕಗಳು ಮಾತು

ಜ್ಯೋತಿರ್ಲಿಂಗವಾದ ಸಂಸ್ಕೃತಿ ಸಂಚಯದ ಜ್ಞಾನದೀವಿಗೆಗಳು. ಜ್ಞಾನವನ್ನು ಕೇವಲ ಪಂಡಿತಮಾನ್ಯರ ಸ್ವತ್ತಾಗಿಸದೆ, ಜನಸಾಮಾನ್ಯರ ಬದುಕಾಗಿಸುವುದು ಅಕ್ಷರಲೋಕದ ಗುರಿಯಾಗಬೇಕು. ಜ್ಞಾನ ಪರಂಪರೆಗಳನ್ನು ಶೋಧನೆಗೆ ಹಚ್ಚುತ್ತಾ, ಆತ್ಮಾವಲೋಕನದ ಒಳಮುಖೀದರ್ಶನ ದೀಪ್ತಿಯಲ್ಲಿ ಸತ್ಯವನ್ನು ಮನಗಾಣಿಸಬೇಕು. ಕಂಡ ಸತ್ಯದ ಬೆಳಕಿನಲ್ಲಿ ವರ್ತಮಾನದ ದಾರಿ ತೆರೆದು ಭವಿಷ್ಯದ ಮುಂಗಾಣ್ಕೆಯಿಂದ ಗುರಿಯ ಕಡೆ ಹೆಜ್ಜೆ ಹಾಕಬೇಕು. ಇದು ಬದುಕಿನ ಗತಿಶೀಲ ಗುಣವಾದಾಗ ಅತಿರೇಕಗಳಿಗೆ ಅವಕಾಶವಿರುವುದಿಲ್ಲ.

ಇದು ಜಾಗತೀಕರಣದ ಯುಗ. ಈ ಪ್ರಕ್ರಿಯೆಯ ವೇಗ ಅಪರಿಮಿತವಾದಷ್ಟು ಅಪಾಯಕಾರಿಯೂ ಆಗಿದೆ. ಜಾಗತೀಕರಣದ ದಾಳಿಯಲ್ಲಿ ಏಕಸಂಸ್ಕೃತಿ, ಏಕಜೀವನ ಶೈಲಿ, ಏಕಭಾಷಾಧಿಪತ್ಯಕ್ಕೆ ಜಗತ್ತನ್ನು ಒಳಗುಮಾಡುವುದರಿಂದ ಆಗುವ ದುಷ್ಪರಿಣಾಮವೆಂದರೆ, ಜೀವನ ವೈವಿಧ್ಯತೆಯ ಬಹುಮುಖೀ ಸಂಸ್ಕೃತಿಗಳ ಸಾವು. ಅತಿರೇಕದ ವೈಪರೀತ್ಯಕ್ಕೆ ಒಳಗಾಗಿ ಬದುಕನ್ನು ಬರಡಾಗಿಸುವ ಹಾಗೂ ಅಸಮಾನತೆಯ ಪ್ರಮಾಣವನ್ನು ಅಗಾಧವಾಗಿಸುವ ಅಪಾಯದಿಂದ ಈ ಸಮುದಾಯಗಳನ್ನು ರಕ್ಷಿಸುವ ಅಗತ್ಯ ಇಂದಿನ ತುರ್ತು. ಈ ತುರ್ತಿನ ಸನ್ನಿವೇಶದಲ್ಲಿ ವಿವೇಕದ ದಾರಿ ತೋರಿ ಅತಿರೇಕಕ್ಕೆ ಕಡಿವಾಣವನ್ನು ಹಾಕಿ ಸಂಸ್ಕೃತಿಯನ್ನು, ಬದುಕನ್ನು ಮಾನವಕೋಟಿಯನ್ನು ಸಂರಕ್ಷಿಸಬಲ್ಲ ಶಕ್ತಿ ಅಕ್ಷರಲೋಕಕ್ಕಿದೆ. ಏಕರೂಪೀ ಗುಣದಿಂದ ಕೂಡಿದ ಜಾಗತೀಕರಣದ ಏಕಾಧಿಪತ್ಯಕ್ಕಿಂತ ಬಹುರೂಪಿ ಗುಣದ ಪ್ರತಿಭಾ ಸಂಪನ್ನತೆಯಿಂದ ಹೊಳೆದ ಅಕ್ಷರಲೋಕ ಜಗತ್ತಿನ ವೈವಿಧ್ಯತೆಯನ್ನು ಸಂರಕ್ಷಿಸುತ್ತದೆ. ವೈವಿಧ್ಯತೆಗಳೊಳಗಿನ ಸೃಜನಶೀಲತೆಯನ್ನು ಬೆಳೆಸುತ್ತದೆ.

ಪುಸ್ತಕಗಳು ಅಮೂರ್ತವಾದ ಜ್ಞಾನಸಂಪತ್ತನ್ನು ಧಾರಣ ಮಾಡಿಕೊಂಡ ಶಬ್ದರೂಪಗಳು. ಶಬ್ದ ಕೇವಲ ಅರ್ಥದ ಅಭಿದಾವೃತ್ತಿಯಲ್ಲಿ ನೆಲೆ ನಿಲ್ಲುವುದಲ್ಲ, ವ್ಯಂಜನಾ ವ್ಯಾಪಾರದಲ್ಲಿ ಅನುಭಾವಿಕವಾಗುವುದು. ಈ ವ್ಯಂಜನಾ ವ್ಯಾಪಾರ ಬುದ್ಧಿಭಾವಗಳ ವಿದ್ಯುದಾಲಿಂಗನ ಪ್ರಭೆಯ ಫಲಿತ. ಹೀಗಾಗಿ ಪುಸ್ತಕಗಳು ಸಂಸ್ಕೃತಿ ನಾಗರಿಕತೆಗಳ ಸಂಚಯಿತ ಫಲವಾದಷ್ಟೇ ಸಂಸ್ಕೃತಿಯನ್ನು ನಿರಂತರವಾಗಿ ಉಜ್ಜೀವಿಸುವ ಧಾತು ದ್ರವ್ಯಗಳು.

ಕನ್ನಡ ಪುಸ್ತಕ ಪ್ರಾಧಿಕಾರವು ಕರ್ನಾಟಕದಾದ್ಯಂತ ಪುಸ್ತಕ ಸಂಸ್ಕೃತಿಯನ್ನು ಬೆಳೆಸುವ ಸದುದ್ದೇಶದಿಂದ ಪ್ರಾರಂಭವಾದ ಒಂದು ಸಂಸ್ಕೃತಿ ಕೇಂದ್ರ. ವಾಚನಾಭಿರುಚಿಯನ್ನು ಬೆಳೆಸುವುದು ಹಾಗೂ ಪುಸ್ತಕೋದ್ಯಮವನ್ನು ಆರೋಗ್ಯಕರವಾಗಿ ಪೋಷಿಸುವುದು ಪ್ರಾಧಿಕಾರದ ಹೊಣೆಯಾಗಿರುತ್ತದೆ. ಆದಕ್ಕಾಗಿ ಹಲವು ರೀತಿಯ ಕಾರ್ಯಯೋಜನೆಗಳನ್ನು ಪ್ರಾಧಿಕಾರ ರೂಪಿಸಿಕೊಂಡಿದೆ. ಯುವ ಸಮುದಾಯದಲ್ಲಿ ವಾಚನಾಭಿರುಚಿ ಹೆಚ್ಚಿಸಲು ವಾಚನಾಭಿರುಚಿ ಕಮ್ಮಟಗಳನ್ನು ನಡೆಸುತ್ತಿದೆ. ಪ್ರಕಾಶಕರು, ಲೇಖಕರು ಹಾಗೂ ಓದುಗರ ನಡುವೆ ಚಿಂತನಾ ಕಮ್ಮಟಗಳನ್ನು ನಡೆಸುತ್ತಿದೆ. ಇವುಗಳ ಜೊತೆಗೆ ಎರಡನೆಯ ಆದ್ಯತೆಯಾಗಿ ಪುಸ್ತಕ ಪ್ರಕಟಣೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ. ಶೈಕ್ಷಣಿಕ ಶಿಸ್ತಿನಲ್ಲಿ ಅಧ್ಯಯನ ಮಾಡುವ ಪರಾಮರ್ಶನ ಗ್ರಂಥಗಳ ಜೊತೆಗೆ ಜನಸಾಮಾನ್ಯರಿಗೆ ಬೇಕಾದ ಅರಿವನ್ನು ಹಂಚುವ ಪುಸ್ತಕಗಳ ಪ್ರಕಟಣೆಯೂ ಪ್ರಾಧಿಕಾರದ ಉದ್ದೇಶವಾಗಿದೆ.

* * * * *

ಜೈನಧರ್ಮಕ್ಕೆ ಐದುಸಾವಿರ ವರ್ಷಗಳ ಪ್ರಾಚೀನ ಇತಿಹಾಸವಿದೆ. ತಾನು ಬೋಧಿಸಿದ ಅಹಿಂಸೆ ಅಪರಿಗ್ರಹ ನೀತಿ, ಸಮ್ಯಕ್‌ತತ್ವ ಹಾಗೂ ಅನೇಕಾಂತವಾದಗಳ ಪ್ರತಿಪಾದನೆಯ ಮುಖೇನ ಈ ನೆಲದ ಜೀವನಗತಿಯ ಮೇಲೆ ಅಪಾರ ಪರಿಣಾಮವನ್ನು ಉಂಟುಮಾಡಿದ ಧರ್ಮವಿದು. ಕನ್ನಡ ಸಾಹಿತ್ಯದ ಮಟ್ಟಿಗಂತೂ ಜೈನಧರ್ಮದ ಪ್ರಭಾವ ಪ್ರೇರಣೆಗಳು ನುಖಮಾಂಸಭಾವದ ನೆಲೆಯವು. ಕನ್ನಡ ನೆಲದಲ್ಲಿ ನಡೆದ ಹಲವು ಧಾರ್ಮಿಕ ಸಂಘರ್ಷಗಳ ಮುಖಾಮುಖಿತ್ವದಲ್ಲಿ ಜೈನಧರ್ಮದ ಏಳುಬೀಳುಗಳು ಕನ್ನಡ ಸಂಸ್ಕೃತಿಯ ಜೀವನೇತಿಹಾಸವನ್ನು ಪ್ರತಿಬಿಂಬಿಸುವುದೇ ಆಗಿದೆ.

ಭಗವಾನ್ ಮಹಾವೀರರ ೨೬೦೦ನೆಯ ಜನ್ಮಕಲ್ಯಾಣ ಮಹೋತ್ಸವದ ಅಂಗವಾಗಿ ಜೈನಧರ್ಮಕ್ಕೆ ಸಂಬಂಧಿಸಿದ ಕೆಲವು ವಿಚಾರಗಳ ಪುಸ್ತಿಕೆಗಳನ್ನು ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸುತ್ತಿದೆ. ಸಮಣಸುತ್ತಂ, ಅನೇಕಾಂತವಾದ, ಅಹಿಂಸೆ, ಹೇಮಚಂದ್ರ, ಮಹಾವೀರವಾಣಿ, ಸಾಮ್ರಾಟ್ ಶ್ರೇಣಿಕ ಬಿಂಬಸಾರ, ಮಹಾಪುರಾಣ, ಕುಂದಾಕುಂದಾಚಾರ್ಯ, ಚಂದನಾಂಬಿಕೆ - ಇವೇ ಈ ಪುಸ್ತಿಕೆಗಳು. ಧಾರ್ಮಿಕ ವಿಚಾರಗಳು ಕೇವಲ ಪಂಡಿತಮಾನ್ಯರ ಜಿಜ್ಞಾಸೆಯ ವಿಚಾರಗಳಾಗಿ

ಮಾತ್ರ ಉಳಿಯದೆ ಶ್ರೀಸಾಮಾನ್ಯರ ಅರಿವಿಗೆ ಅನ್ನವಾಗಬೇಕು ಎಂಬುದು ಇಂಥ ಪ್ರಕಟಣೆಯ ಹಿಂದಿನ ಉದ್ದೇಶ.

ಭಗವಾನ್ ಮಹಾವೀರರ ೨೬೦೦ನೇಯ ಜನ್ಮಕಲ್ಯಾಣ ಮಹೋತ್ಸವದ ರಾಜ್ಯ ಸಮಿತಿಯ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆಯವರ ಅಪೇಕ್ಷೆಗೆ ಅನುಸಾರವಾಗಿ ಈ ಪ್ರಕಟಕಾರ್ಯ ನಡೆಯುತ್ತಿದೆ. ಸಂಪಾದಕ ಮಂಡಳಿಯವರು ವಿಷಯಗಳ ಆಯ್ಕೆ ಮಾಡಿ, ವಿಷಯತಜ್ಞರಿಂದ ಬರೆಸುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಸಂಪಾದಕರಾಗಿ ಡಾ॥ ಎಂ.ಎ. ಜಯಚಂದ್ರ ಅವರು ದಕ್ಷತೆಯಿಂದ ಕಾರ್ಯ ನಿರ್ವಹಿಸಿದ್ದಾರೆ. ಈ ಎಲ್ಲ ಮಹನೀಯರಿಗೆ ಕನ್ನಡ ಪುಸ್ತಕ ಪ್ರಾಧಿಕಾರವು ಆತ್ಮೀಯ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ದಿನಾಂಕ : ೮.೯.೨೦೦೫
ಸ್ಥಳ : ಬೆಂಗಳೂರು

ಪ್ರೊ। ಎಸ್.ಜಿ. ಸಿದ್ಧರಾಮಯ್ಯ
ಅಧ್ಯಕ್ಷರು

# ಕಲಿಕಾಲ ಸರ್ವಜ್ಞ ಹೇಮಚಂದ್ರ

ಹೇಮಚಂದ್ರರ ಜನನದ ಮುನ್ನ ಗುಜರಾತದ ಸ್ಥಿತಿ ಪ್ರಾಚೀನ ಕಾಲದಿಂದಲೂ ಧರ್ಮ, ಸಾಹಿತ್ಯ, ಸಂಸ್ಕೃತಿ, ಕಲೆ ಮತ್ತು ವಿದ್ಯೆಗಳಿಗೆ ಕೇಂದ್ರವಾಗಿತ್ತು. ಭಗವಾನ್ ನೇಮಿನಾಥಸ್ವಾಮಿಯವರ ಪಾವನ ನಿರ್ವಾಣ ಭೂಮಿ ಊರ್ಜಯಂತಗಿರಿ ಮತ್ತು ಗೀತೆಯ ಮಹಾಸಂದೇಶವನ್ನು ಸಾರಿದ ಶ್ರೀ ಕೃಷ್ಣನ ರಾಜಧಾನಿಯಾಗಿದ್ದ ದ್ವಾರಕಾನಗರ ಇಲ್ಲಿಯೇ ಇವೆ. ಶ್ರೀ ಧರಸೇನಾಚಾರ್ಯರು ಭೂತಬಲಿ ಮತ್ತು ಪುಷ್ಪದಂತರಿಗೆ ಶ್ರುತಾಭ್ಯಾಸ ಮಾಡಿಸಿದ್ದು ಗುಜರಾತಿನ ಚಂದ್ರಗುಹೆಯಲ್ಲಿಯೇ. ಜೈನ ಧರ್ಮದ ಸಾರಸರ್ವಸ್ವವೆಂದು ಪರಿಗಣಿತವಾಗಿರುವ ತತ್ತ್ವಾರ್ಥ ಸೂತ್ರವನ್ನು ಉಮಾಸ್ವಾತಿಯವರು ರಚಿಸಿದ್ದು ಗುಜರಾತಿನಲ್ಲಂತರ್ಗತವಾದ ಸೌರಾಷ್ಟ್ರದ ಗಿರಿನಗರದಲ್ಲಿ. ಕ್ರಿ.ಶ. ೪೫೪ರಲ್ಲಿ ದೇವರ್ಧಿಗಣಿಕ್ಷಮಾ ಶ್ರಮಣನ ಅಧ್ಯಕ್ಷತೆಯಲ್ಲಿ ನಡೆದ ಮುನಿ ಸಮ್ಮೇಳನದಲ್ಲಿ ೪೫-೪೬ ಆಗಮ ಗ್ರಂಥಗಳನ್ನು ಸಂಕಲನ ಮಾಡಿದ್ದು ಗುಜರಾತಿನ ವಲ್ಲಭೀ ನಗರದಲ್ಲಿ. ಈ ವಲ್ಲಭೀಯಲ್ಲಿ ವಿಶ್ವವಿದ್ಯಾಲಯವಿತ್ತೆಂದು ಚೀನೀಯಾತ್ರಿಕರೂ ಹೇಳಿದ್ದಾರೆ. ಈ ರೀತಿ ಗುಜರಾತ್ ರಾಜ್ಯ ಭಾರತೀಯ ಸಂಸ್ಕೃತಿಯ ಶ್ರೀಮಂತಿಕೆಗೆ, ಹಿರಿಮೆಗೆ ತನ್ನ ವಿಶಿಷ್ಟ ಕಾಣಿಕೆಯನ್ನು ಸಲ್ಲಿಸಿದೆ.

ಗುರ್ಜರನಾಡನ್ನು ಆಳಿದವರಲ್ಲಿ ಚಾಲುಕ್ಯ ವಂಶೀಯರು ಪ್ರಮುಖರಾದವರು. ಈ ವಂಶದ ಮೂಲರಾಜನು ಅಣಹಿಲವಾಡವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದನು. ವಿದ್ವಾಂಸರನ್ನು ಆದರಿಸಿ ಗೌರವಿಸುವುದು ಇವನಿಗೆ ವ್ಯಸನವೇ ಆಗಿತ್ತು. ಇವನು ಸಾವಿರಾರು ಬ್ರಾಹ್ಮಣ ವಿದ್ವಾಂಸರನ್ನು ಆಹ್ವಾನಿಸಿ ಅವರನ್ನು ಅಣಹಿಲವಾಡಿನಲ್ಲಿ ನೆಲಸುವಂತೆ ಮಾಡಿದನು. ಅವರು ಬರುವಾಗ ಅನೇಕ ಧಾರ್ಮಿಕ ಗ್ರಂಥಗಳನ್ನು ತಂದು ಈ ನಗರವನ್ನು ವಿದ್ಯಾಕೇಂದ್ರವನ್ನಾಗಿ ಮಾಡಿದರು. ಮೂಲರಾಜನು ಶಿವಭಕ್ತನಾದರೂ

ಶಿವ ಮಂದಿರದೊಂದಿಗೆ 'ಮೂಲರಾಜ ವಸಹಿಕಾ' ಎಂಬ ಜೈನ ಮಂದಿರವನ್ನು ನಿರ್ಮಾಣ ಮಾಡಿದನು. ಮೂಲ ರಾಜನ ತರುವಾಯ ಚಾಮುಂಡರಾಜ, ವಲ್ಲಭರಾಜ ಹಾಗೂ ದುರ್ಲಭರಾಜರು ಆಳಿದರು.

ದುರ್ಲಭರಾಜನಿಗೆ ಮಕ್ಕಳಿಲ್ಲದುದರಿಂದ ಅವನ ತಮ್ಮ ನಾಗರಾಜನ ಮಗ ಭೀಮನು ಕ್ರಿ.ಶ. ೧೦೨೧ ರಿಂದ ೧೦೬೪ ರವರೆಗೆ ೪೦ ವರ್ಷಗಳ ಕಾಲ ರಾಜ್ಯಭಾರ ಮಾಡಿದನು. ಇವನು ಮಾಳವ ಹಾಗೂ ಕಳಚೂರಿ ರಾಜ್ಯಗಳನ್ನು ಗೆದ್ದು ತನ್ನ ರಾಜ್ಯವನ್ನು ಸುಭದ್ರ ಮಾಡಿಕೊಂಡನು. ಇವನ ಕಾಲದಲ್ಲಿ ವಿದ್ಯೆ ಮತ್ತು ಕಲೆಗಳು ಹೆಚ್ಚಿಗೆ ಬೆಳೆದವು. ಭೀಮನ ಸೇನಾಪತಿ ವಿಮಲನು ಅಬೂಪರ್ವತದ ಮೇಲೆ ಕಲಾಪೂರ್ಣವಾದ ಆದಿನಾಥ ಭಗವಾನರ ಮಂದಿರವನ್ನು ನಿರ್ಮಿಸಿದನು. ಭೀಮನ ಮಗ ಕರ್ಣನೂ ಸಹ ತಂದೆಯಂತೆ ಪರಾಕ್ರಮಿ ಹಾಗೂ ೨೦ ವರ್ಷಗಳು ಅತ್ಯಂತ ದಕ್ಷತೆಯಿಂದ ರಾಜ್ಯಭಾರ ಮಾಡಿದನು. ಇವನು ಕರ್ಣಾವತಿ ಇಂದಿನ ಅಹಮದಾಬಾದ್ ನಗರವನ್ನು ನಿರ್ಮಿಸಿದನು. ಹಾಗೂ ಅನೇಕ ಮಂದಿರಗಳನ್ನೂ ಕೆರೆ ಕಟ್ಟೆಗಳನ್ನೂ ಕಟ್ಟಿಸಿದನು. ಇವನ ಆಸ್ಥಾನದಲ್ಲಿ ಅನೇಕ ವಿದ್ವಾಂಸರಿದ್ದರು, ಅವರಲ್ಲಿ ಕವಿ ಬಿಲ್ಹಣೂ ಹಾಗೂ ಆಗಮ ಶಿರೋಮಣಿ ಅಭಯ ದೇವಸೂರಿಗಳು ನಕ್ಷತ್ರಗಳಂತೆ ಶೋಭಿಸುತ್ತಿದ್ದರು. ಈ ರೀತಿ ಚಾಳುಕ್ಯ ವಂಶದವರು ಕಟ್ಟಿ ಬೆಳೆಸಿದ ಅಣಹಿಲವಾಡ ಅಂದು ಭಾರತದ ಪ್ರಸಿದ್ಧ ನಗರಗಳಾದ ಉಜ್ಜಯಿನಿ, ಕನ್ಯಾಕುಬ್ಜ ಮತ್ತು ಪಾಟಲೀಪುತ್ರಗಳಂತೆ ಹೆಸರು ಗಳಿಸಿತು. ಜಯಸಿಂಹ ಮತ್ತು ಕುಮಾರಪಾಲರ ಕಾಲದಲ್ಲಿ ಇದು ವೈಭವದ ಪರಾಕಾಷ್ಠತೆಯನ್ನು ತಲುಪಿತು. ಗುಜರಾತದ ಈ ಸುವರ್ಣಯುಗದಲ್ಲಿಯೇ ಆಚಾರ್ಯ ಹೇಮಚಂದ್ರರ ಜನನವಾದುದು.

## ಹೇಮಚಂದ್ರನ ಜನನ

ಹೇಮಚಂದ್ರನ ಜನನ ಗುಜರಾತಿನ ಅಹಮದಾಬಾದಿಗೆ ೨೦ ಮೈಲಿ ದೂರದಲ್ಲಿರುವ ದುಂಧುಕಾ (ದಂಧೂಕಾ) ನಗರದಲ್ಲಿ ಕ್ರಿ.ಶ. ೧೦೮೯ ರಲ್ಲಿ ಕಾರ್ತಿಕ ಪೌರ್ಣಮಿ ರಾತ್ರಿ ಆಯಿತು. ಈ ಧುಂದುಕಾ ಸುಪ್ರಸಿದ್ಧ ಹಾಗೂ ಸಮೃದ್ಧ ನಗರವಾಗಿತ್ತು. ಈ ನಗರದಲ್ಲಿದ್ದ ಮೋಢ ವಂಶೀಯ ಮನೆತನದಲ್ಲಿ ಹೇಮಚಂದ್ರನ ಜನನವಾಯಿತು. ಅವನು ಚಾಚಿಗ ಹಾಗೂ ಪಾಹಿಣಿದೇವಿಯರ ಮಗ. ಈಗಲೂ

ಈ ಮೋಡ ವಂಶೀಯ ವೈಶ್ಯರನ್ನು ಮೋಡಬನಿಯ ಎಂದು ಕರೆಯುತ್ತಾರೆ. ಇವರ ಕುಲದೇವಿ ಚಾಮುಂಡಾ ಹಾಗೂ ಕುಲಯಕ್ಷಗೋನಸ. ತಂದೆ ಈ ಕುಲದೇವತೆಗಳ ಪರಮ ಭಕ್ತನಾದುದರಿಂದ ಇಬ್ಬರು ದೇವತೆಗಳ ಹೆಸರಿನ ಮೊದಲ ಅಕ್ಷರಗಳನ್ನು ಸೇರಿಸಿ ಬಾಲಕನ ಹೆಸರನ್ನು ಚಾಂಗದೇವನೆಂದು ಕರೆದರು. ಆದ್ದರಿಂದ ಆಚಾರ್ಯ ಹೇಮಚಂದ್ರ ಮೂಲ ಹೆಸರು ಚಾಂಗದೇವನೆಂದಾಯಿತು. ಹೇಮಚಂದ್ರನ ತಾಯಿ ಪಾಹಿಣಿ ಮತ್ತು ಸೋದರ ಮಾವ ನೇಮಿಸಾಗರರು ಜೈನಧರ್ಮೀಯರಾಗಿದ್ದರೆ ; ತಂದೆ ಬಾಚಿಗನು ಮಾತ್ರ ಶಿವಭಕ್ತನಾಗಿದ್ದನು. ಈ ವಂಶದವರು ಪರಂಪರಾಗತವಾಗಿ ಶಿವಭಕ್ತರಾಗಿದ್ದರೆಂದು ತಿಳಿದು ಬರುತ್ತದೆ.

ಪಾಹಿಣಿಯು ಜೈನ ಧರ್ಮಾವಲಂಬಿಯಾಗಿ ಮತ್ತು ಬಾಚಿಗನು ಶೈವ ಧರ್ಮೀಯನಾಗಿ ಒಂದೇ ಮನೆಯಲ್ಲಿ ಒಟ್ಟಿಗೇ ಸಂಸಾರ ಮಾಡಿಕೊಂಡಿದ್ದುದು ಇಂದಿನವರಿಗೆ ಆಶ್ಚರ್ಯವಾಗಿ ಕಾಣಬಹುದು. ಆದರೆ ಪ್ರಾಚೀನಕಾಲದಲ್ಲಿ ಕರ್ನಾಟಕ ಹಾಗೂ ಗುಜರಾತ್‌ಗಳಲ್ಲಿ ಪತಿಪತ್ನಿಯರು ಭಿನ್ನಮತಾವಲಂಬಿಗಳಾಗಿದ್ದ ಅನೇಕ ನಿದರ್ಶನಗಳು ದೊರಕುತ್ತವೆ. ಉದಾಹರಣೆಗೆ ಹೊಯ್ಸಳ ದೊರೆ ವಿಷ್ಣುವರ್ಧನ ವಿಷ್ಣು ಭಕ್ತನಾಗಿದ್ದರೆ ಆತನ ಮಡದಿ ಶಾಂತಲಾದೇವಿ ಪರಮಜಿನಭಕ್ತೆಯಾಗಿದ್ದಳು. ಆದರೆ ಆಕೆಯ ತಂದೆ ಮಾರಸಿಂಗಯ್ಯ ಕಟ್ಟನ ಶಿವೋಪಾಸಕನಾಗಿದ್ದನು. ಆದರೂ ಎಳ್ಳಷ್ಟೂ ಕಹಿಯ ವಾತಾವರಣವಿಲ್ಲದೆ ಈ ಸಂಸಾರ ಆದರ್ಶ ಜೀವನ ನಡೆಸಿತು.

ಒಮ್ಮೆ ಆಚಾರ್ಯ ದೇವಚಂದ್ರರು ಧರ್ಮ ಪ್ರಸಾರಾರ್ಥವಾಗಿ ದುಂಧುಕಾನಗರಕ್ಕೆ ಆಗಮಿಸಿದರು. ಆಗ ಪಾಹಿಣಿ ಆಚಾರ್ಯರ ದರ್ಶನಕ್ಕಾಗಿ ಜಿನಮಂದಿರಕ್ಕೆ ಹೋಗಿದ್ದಳು. ಅಲ್ಲಿ ತಾನು ಸ್ವಪ್ನದಲ್ಲಿ ಚಿಂತಾಮಣಿ ರತ್ನವನ್ನು ಪಡೆದು ಅದನ್ನು ಆಚಾರ್ಯರಿಗೆ ಸಮರ್ಪಿಸಿದುದಾಗಿ ತಿಳಿಸಿದಳು. ಮತ್ತು ಅದರ ಅರ್ಥವೇನೆಂದು ಕೇಳಿದಳು. ಅದಕ್ಕೆ ಆಚಾರ್ಯರು 'ನಿನಗೆ ಕೌಸ್ತುಭಮಣಿ ಸಮಾನವಾದ ಪುತ್ರರತ್ನ ಹುಟ್ಟುವನೆಂದೂ, ಆದರೆ ಅವನನ್ನು ನೀನು ಗುರುಗಳಿಗೆ ಸಮರ್ಪಿಸುವೆಯೆಂದೂ ಮತ್ತು ಆತನು ಸೂರಿರಾಜನಾಗಿ ಜೈನ ಸಿದ್ಧಾಂತವನ್ನು ಸಕಲರಿಗೂ ಪ್ರಸಾರ ಮಾಡುವನು ಹಾಗೂ ಅವನೆಂದಿಗೂ ಗೃಹಸ್ಥನಾಗಿರುವುದಿಲ್ಲ

ವೆಂಬುದು ಇದರ ಅರ್ಥ'- ಎಂದು ವ್ಯಾಖ್ಯಾನ ಮಾಡಿ ಹೇಳಿದರು. ಈ ರೀತಿ ಹೇಮಚಂದ್ರನ ಜನನದ ಮುನ್ನವೇ ಆವನ ಭವಿಷ್ಯದ ಶುಭ ಲಕ್ಷಣಗಳು ಪ್ರಕಟವಾಗಿದ್ದವು. ಈ ರೀತಿ ಪ್ರಕಟವಾಗುವುದು ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯವಾಗಿದೆ.

## ಬಾಲ್ಯಕಾಲ

ಕುಮಾರ ಚಾಂಗದೇವನು ತುಂಬ ಚೂಟಿಯಾಗಿದ್ದನು. ಹುಡುಗನ ಮನಸ್ಸು ಧರ್ಮವನ್ನು ಬಿಟ್ಟು ಬೇರೆಯಾವ ವಿಷಯದಲ್ಲೂ ಆಸಕ್ತವಾಗುತ್ತಿರಲಿಲ್ಲ. ಆತ ತನ್ನ ತಾಯಿಯ ಜೊತೆ ಪ್ರತಿದಿನ ಮಂದಿರಕ್ಕೆ ಹೋಗುತ್ತಿದ್ದನು. ಅಲ್ಲಿ ದೇವರ ದರ್ಶನ ಹಾಗೂ ಗುರುಗಳ ಪ್ರವಚನ ಕೇಳುವುದರಲ್ಲಿ ತಲ್ಲೀನನಾಗಿರುತ್ತಿದ್ದನು. ಒಮ್ಮೆ ದೇವಚಂದ್ರಸೂರಿಗಳು ದುಂಧುಕಾನಗರಕ್ಕೆ ಆಗಮಿಸಿ ಜಿನಮಂದಿರದಲ್ಲಿ ಬಿಡಾರ ಮಾಡಿದರು. ಚಾಂಗದೇವನು ಅಲ್ಲಿಗೆ ಬಂದು ಬಾಲಚಾಪಲ್ಯದಿಂದ ಅವರ ಆಸನದ ಮೇಲೆ ಹೋಗಿ ಕುಳಿತನು. ಆತನ ಅಲೌಕಿಕ ಶುಭ ಲಕ್ಷಣಗಳನ್ನು ನೋಡಿ ಆಚಾರ್ಯರು, ಈ ಬಾಲಕ ಕ್ಷತ್ರಿಯೋತ್ಪನ್ನನಾಗಿದ್ದರೆ ಸಾರ್ವಭೌಮ ನಾಗುವನೆಂದೂ, ವೈಶ್ಯ ಅಥವಾ ಬ್ರಾಹ್ಮಣ ಕುಲೋತ್ಪನ್ನನಾಗಿದ್ದರೆ ದೀಕ್ಷಿತನಾಗಿ ಯುಗ ಪ್ರಧಾನ ವ್ಯಕ್ತಿಯಾಗಿ ಈ ಯುಗವನ್ನು ಕೃತಯುಗವನ್ನಾಗಿ ಮಾಡುವೆನೆಂದು ತಿಳಿಸಿದರು.

ಇನ್ನೊಂದು ದಿವಸ ಆಚಾರ್ಯರ ಪ್ರವಚನ ನಡೆಯುತ್ತಿತ್ತು. ತಾಯಿಯ ಸಂಗಡ ಕುಳಿತು ಧ್ಯಾನದಿಂದ ಆಲಿಸುತ್ತಿದ್ದ ಚಾಂಗದೇವ, "ಭಗವಾನ್ ಸುಚಾರು ರೂಪಿ ನಾವೆಂಬಿಂದ ನಾನು ಈ ಸಂಸಾರ ಸಾಗರವನ್ನು ದಾಟುವಂತೆ ಮಾಡಿರಿ" ಎಂದು ಪ್ರಾರ್ಥಿಸಿದನು. ಹುಡುಗನ ಸಹಜ ಧೈರ್ಯ, ಪ್ರತಿಭೆ, ಭವ್ಯತೆ ಮತ್ತು ಶರೀರದ ಸೌಷ್ಠವಗಳು ದೇವಚಂದ್ರರ ಮೇಲೆ ಅಪಾರ ಪ್ರಭಾವ ಬೀರಿದವು. ಈ ಬಾಲಕನನ್ನು ಪಡೆಯಲು ಆಚಾರ್ಯರು ತುಂಬ ಉತ್ಸುಕರಾದರು. ಇಷ್ಟೊತ್ತಿಗಾಗಲೇ ಬಾಲಕನೂ ಸಾಧುವಾಗಲು ನಿಶ್ಚಯಿಸಿದ್ದನು. ಊರಿನ ಪ್ರಮುಖರೊಡನೆ ದೇವಚಂದ್ರರು ಸ್ವಯಂ ಚಾಚಿಗನ ಮನೆಗೆ ಬಂದರು. ಆದರೆ ಚಾಚಿಗನು ಯಾತ್ರಾರ್ಥಿಯಾಗಿ ಹೊರಗೆ ಹೋಗಿದ್ದನು. ಆತನ ವಿವೇಕವತಿ ಮಡದಿ

ಪಾಹಿಣಿಯು ಎಲ್ಲರನ್ನೂ ಸ್ವಾಗತಿಸಿ ಸತ್ಕರಿಸಿದಳು. ಆಚಾರ್ಯರು ಚಾಂಗದೇವನನ್ನು ತಮ್ಮೊಡನೆ ಕರೆದುಕೊಂಡು ಹೋಗುವ ಅಭಿಲಾಷೆಯನ್ನು ವ್ಯಕ್ತಪಡಿಸಿದರು. ಅವರ ಬೇಡಿಕೆಯನ್ನು ಕೇಳಿ ಪಾಹಿಣಿಗೆ ಹಿಡಿಸಲಾರದಷ್ಟು ಆನಂದವಾಯಿತು. ಆದರೆ ಗಂಡನ ಅಪ್ಪಣೆಯಿಲ್ಲದೆ ಮಗನನ್ನು ಕೊಡಲಾರದುದಕ್ಕಾಗಿ, ಸಂಕಟಪಟ್ಟಳು. "ಮಹಾಸ್ವಾಮಿ ! ಮಕ್ಕಳ ಮೇಲೆ ತಂದೆ ತಾಯಿಗಳಿಬ್ಬರಿಗೂ ಸಮಾನ ಅಧಿಕಾರವಿರುತ್ತದೆ. ಯಜಮಾನರು ಹೊರಗೆ ಹೋಗಿದ್ದಾರೆ. ಅವರು ಮಿಥ್ಯಾದೃಷ್ಟಿಯಿರಬಹುದು. ಆದರೂ ಮನೆಯ ಒಡೆಯರಾಗಿದ್ದಾರೆ. ಆದ್ದರಿಂದ ನಾನೊಬ್ಬಳೇ ಮಗನನ್ನು ನಿಮಗೆ ಹೇಗೆ ಒಪ್ಪಿಸಲಿ ?" ಎಂದು ಪರಿತಪಿಸಿದಳು. ಆಗ ಊರಿನ ಪಂಚರು, "ಈಗ ನೀನು ಮಗನನ್ನು ಗುರುಗಳ ಮಡಿಲಿನಲ್ಲಿ ಹಾಕಿ ಬಿಡು. ನಿನ್ನ ಗಂಡ ಬಂದನಂತರ ನಾವು ಅವನ ಒಪ್ಪಿಗೆ ಪಡೆಯುತ್ತೇವೆ" ಎಂದು ನ್ಯಾಯ ಮಾಡಿದರು. ಅವರ ಮಾತಿಗೆ ಒಪ್ಪಿ ಪಾಹಿಣಿ ತನ್ನ ಮಗನನ್ನು ಆಚಾರ್ಯರ ಪಾದಗಳಿಗೆ ಸಮರ್ಪಿಸಿ ಮಹಾತ್ಯಾಗ ಮಾಡಿದಳು.

ಮಾತೃ ಮೋಹ ಈ ತ್ಯಾಗಕ್ಕೆ ಅಡ್ಡ ಬಂದಿದ್ದರೆ ಗುಜರಾತ್, ಭಾರತ ಹಾಗೂ ಜಗತ್ತು ಕಲಿಕಾಲ ಸರ್ವಜ್ಞನನ್ನು ಕಳೆದುಕೊಳ್ಳುತ್ತಿತ್ತು ; ಸಂಸ್ಕೃತ, ಪ್ರಾಕೃತ ಭಾಷೆಗಳು ತಮ್ಮ ಸಾರ್ವಭೌಮನನ್ನು ಕಳೆದುಕೊಂಡು ಬಡವಾಗುತ್ತಿದ್ದವು. ದೇವಚಂದ್ರರು ಪ್ರತಿಭಾಸಂಪನ್ನನಾದ ಈ ಹುಡುಗನನ್ನು ಪಡೆದು ಪ್ರಸನ್ನರಾಗಿ ಅವನನ್ನು "ವತ್ಸ ? ನೀನು ನಮ್ಮ ಶಿಷ್ಯನಾಗುವಿಯೇನು ?" ಎಂದು ಕೇಳಿದರು. ಕೂಡಲೇ ಬಾಲಕ, "ತಮ್ಮ ಶಿಷ್ಯನಾಗಲು ನಾನು ತುಂಬ ಕಾತುರದಿಂದಿದ್ದೇನೆ" ಎಂದು ಉತ್ತರಿಸಿದ. ಇದನ್ನು ಕೇಳಿ ಆಚಾರ್ಯರಿಗೆ ಅಪಾರ ಸಂತೋಷವಾಯಿತು. ಆದರೆ ಬಾಚಿಗ ಯಾತ್ರೆಯಿಂದ ಹಿಂತಿರುಗಿ ಬಂದು ಎಲ್ಲಿ ಹುಡುಗನನ್ನು ಕಿತ್ತುಕೊಳ್ಳುವನೋ ಎಂಬ ಭಯ ಅವರನ್ನು ಕಾಡಿತು. ಆದ್ದರಿಂದ ಅವರು ಅವನನ್ನು ಕೂಡಲೇ ಕರೆದುಕೊಂಡು ಕರ್ಣಾವತಿಗೆ ಹೋದರು. ಇದು ಕ್ರಿ.ಶ. ೧೦೯೩ರಲ್ಲಿ ಆಯಿತು. ಆಗ ಹುಡುಗನಿಗೆ ಕೇವಲ ಐದು ವರ್ಷ ವಯಸ್ಸಾಗಿತ್ತು.

ಕರ್ಣಾವತಿಗೆ ಆಗಮಿಸಿದ ಆಚಾರ್ಯರು ಹುಡುಗನನ್ನು ಉದಯನ ಮಂತ್ರಿಯ ವಶಕ್ಕೆ ಒಪ್ಪಿಸಿದರು. ಆಗ ಉದಯನ ಜೈನ ಸಂಘದಲ್ಲಿ

ಅತ್ಯಧಿಕ ಪ್ರಭಾವಶಾಲಿ ವ್ಯಕ್ತಿಯಾಗಿದ್ದ. ಇವನು ಮೂಲತಃ ಮಾರವಾಡದ ಶ್ರೀ ಮಾಲ ನಗರದವನಾಗಿದ್ದ. ವ್ಯಾಪಾರ ನಿಮಿತ್ತ ಆಗಾಗ್ಗೆ ಕರ್ಣಾವತಿಗೆ ಬರುತ್ತಿದ್ದ. ಕಾಲಕ್ರಮದಲ್ಲಿ ಇಲ್ಲಿಯೇ ನೆಲೆಸಿ ಸಿದ್ಧರಾಜನ ಸ್ನೇಹ ಬೆಳೆಸಿ ಆತನ ವಿಶ್ವಾಸಕ್ಕೆ ಪಾತ್ರನಾಗಿ ಸ್ತಂಭತೀರ್ಥ ಪ್ರದೇಶದ ರಾಜಕೀಯ ಸಲಹೆಗಾರನಾಗಿ ಕೊನೆಗೆ ಮಂತ್ರಿಯಾಗಿ ನೇಮಕಗೊಂಡನು. ಇಂಥವನ ಹತ್ತಿರ ಚಾಂಗದೇವನನ್ನಿಟ್ಟು ದೇವಚಂದ್ರಾಚಾರ್ಯರು ನಿಶ್ಚಿಂತೆಯಿಂದಿದ್ದರು.

ಚಾಚಿಗ ತೀರ್ಥಯಾತ್ರೆಯಿಂದ ಹಿಂತಿರುಗಿದ. ಮನೆಯಲ್ಲಿ ಮಗನಿಲ್ಲದುದನ್ನು ನೋಡಿದ. ಅವನನ್ನು ಆಚಾರ್ಯರು ತಮ್ಮ ಜೊತೆ ಕರೆದುಕೊಂಡು ಹೋದರೆಂಬುದನ್ನ ಕೇಳಿ ಖೇದಗೊಂಡ. ತಕ್ಷಣ ಕರ್ಣಾವತಿಗೆ ಧಾವಿಸಿ ಬಂದನು. ದುಃಖಿತನಾದ ಚಾಚಿಗ ಆಚಾರ್ಯರಿಗೂ ನಮಸ್ಕರಿಸಲಿಲ್ಲ. ಅವರಿಗೆ ಇವನ ಪುತ್ರ ಮೋಹ ಅರ್ಥವಾಯಿತು. ಮೋಹನೀಯ ಕರ್ಮದ ವಿಚಿತ್ರ ವ್ಯಾಪಾರವನ್ನು ಇವನಿಗೆ ವಿವರಿಸಿ ಹೇಳಿದರು ; ಅದರ ಹಿಡಿತದಿಂದ ಬಿಡಿಸಿಕೊಳ್ಳಬೇಕಾದ ಆವಶ್ಯಕತೆಯನ್ನೂ ತಿಳಿಯಪಡಿಸಿದರು. ಈ ಮಧ್ಯೆ ಆಚಾರ್ಯರು ಉದಯನ ಮಂತ್ರಿಯನ್ನು ಕರೆಸಿದರು.

ಉದಯನ ಚತುರತೆಯಿಂದ ಚಾಚಿಗನನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ಸತ್ಕರಿಸಿದನು. ಅವನ ತೊಡೆಯ ಮೇಲೆ ಚಾಂಗದೇವನನ್ನು ಕೂರಿಸಿ, ಅವನ ಕೈಗೆ ಮೂರು ಲಕ್ಷ ರೂ.ಗಳ ಥೈಲಿಯೊಂದನ್ನು ಕೊಟ್ಟನು. ಈಗಾಗಲೇ ಚಾಚಿಗನ ಮನಸ್ಸು ಆಚಾರ್ಯರ ಧರ್ಮದ ನುಡಿಗಳಿಂದ ಶಾಂತವಾಗಿತ್ತು, ದ್ರವೀಭೂತವಾಗಿತ್ತು. ಆದರೆ ಹಣದ ಥೈಲಿಯನ್ನು ನೋಡಿ, "ನೀವು ಮೂರು ಲಕ್ಷ ರೂ.ಗಳನ್ನು ಕೊಟ್ಟು ಉದಾರತೆಯನ್ನು ತೋರಿಸಿದ್ದೀರಿ. ಆದರೆ ಅದರೊಡನೆ ಕೃಪಣತೆಯನ್ನೂ ವ್ಯಕ್ತಪಡಿಸಿದ್ದೀರಿ. ಏಕೆಂದರೆ, ಅಮೂಲ್ಯವಾದ ನನ್ನ ಮಗನ ಬೆಲೆಯನ್ನು ಇಷ್ಟು ಹಗುರ ಮಾಡಿದ್ದೀರಲ್ಲ ಎಂದು. ಆದರೂ ಅವನನ್ನು ಪಡೆಯಬೇಕೆಂಬ ನಿನ್ನ ಹಂಬಲ ಬಹಳ ದೊಡ್ಡದು. ಆದ್ದರಿಂದ ನಿಮ್ಮ ಇಚ್ಛೆಗೆ ಜಯವಾಗಲಿ. ಆದರೆ ನಿಮ್ಮ ಹಣವನ್ನು ನಾನು ಶಿವ ಮಾಲಿನ್ಯದಂತೆ ಸ್ಪರ್ಶ ಮಾಡುವುದಿಲ್ಲ" ಎಂದು ತಿಳಿಸಿ, ಅದನ್ನು ಹಿಂತಿರುಗಿಸಿದನು.

ಮಂತ್ರಿಯ ಮನೆಯಲ್ಲಿದ್ದರೆ ಮಗನಿಗೆ ಒಳ್ಳೆಯ ವಿದ್ಯಾಬುದ್ಧಿಗಳು ಬರುವುದೆಂದು ಅರಿತು, ಚಾಚಿಗನು ತನ್ನ ಮಗನನ್ನು ಉದಯನ ಮನೆಯಲ್ಲಿ ಬಿಡಲು ಒಪ್ಪಿದನು. ಇದಕ್ಕೆ ಉದಯನು "ನಿನ್ನ ಮಗನನ್ನು ನನ್ನ ಹತ್ತಿರ ಬಿಟ್ಟರೆ ಅವನ ಅಭ್ಯುದಯ ಯಾವ ರೀತಿಯಿಂದಲೂ ಆಗುವುದಿಲ್ಲ. ಆದರೆ ಪೂಜ್ಯ ಆಚಾರ್ಯರ ವಶಕ್ಕೆ ಒಪ್ಪಿಸಿದರೆ ಅವನು ಗುರು ಪ್ರಸಾದದಿಂದ ಬಾಲ ಸೂರ್ಯನಂತೆ ಬೆಳಗಿ ತ್ರಿಲೋಕಗಳಲ್ಲೂ ಪೂಜ್ಯತೆಯನ್ನು ಪಡೆಯುತ್ತಾನೆ. ಆದ್ದರಿಂದ ವಿವೇಚಿಸಿ ಉತ್ತರ ಕೊಡು. ನೀನು ಪುತ್ರ ಹಿತೈಷಿಯಾಗಿದ್ದೀಯ ಹಾಗೂ ಧರ್ಮವನ್ನು ರಕ್ಷಿಸಬೇಕೆಂಬ ಸಂಕಲ್ಪವೂ ನಿನ್ನಲಿದೆ" ಎಂದು ಹೇಳಿದನು. ಉದಯನ ಮಾತುಗಳಿಗೆ ಶರಣು ಹೋಗಿ ಚಾಚಿಗನು ದೇವಚಂದ್ರ ಗುರುಗಳಿಗೆ ತನ್ನ ಮಗ ಚಾಂಗದೇವನನ್ನು ಸಮರ್ಪಿಸಿದನು. ಈ ನಿಶ್ಚಯದಿಂದ ಆಚಾರ್ಯರು ಸಂತುಷ್ಟರಾದರು.

ದೇವಚಂದ್ರಾಚಾರ್ಯರು ಚತುರ್ವಿಧ ಸಂಘದ ಸಮಕ್ಷಮದಲ್ಲಿ ಸ್ತಂಭತೀರ್ಥದ ಪಾರ್ಶ್ವನಾಥ ಚೈತ್ಯಾಲಯದಲ್ಲಿ ಕ್ರಿ.ಶ. ೧೦೯೭ನೇ ಮಾಘ ಶುಕ್ಲ ಚತುರ್ದಶಿ ದಿವಸ ಎಂಟು ವರ್ಷದ ಬಾಲಕನಿಗೆ ವೈಭವಯುಕ್ತವಾಗಿ ದೀಕ್ಷಾಗ್ರಹಣ ಮಹೋತ್ಸವವನ್ನು ಮಾಡಿ ಚಾಂಗದೇವನಿಗೆ ಸೋಮಚಂದ್ರನೆಂಬ ದೀಕ್ಷಾನಾಮವನ್ನಿಟ್ಟರು. ಇದರ ನೆನಪಿಗಾಗಿ ಮುಂದೆ ಉದಯನನು ಇಲ್ಲಿ ದೀಕ್ಷಾವಿಹಾರವನ್ನು ನಿರ್ಮಿಸಿದನು. ಬಾಲಕನು ಪ್ರತಿಭಾವಂತನಾದುದರಿಂದ ಅಗಸ್ತ್ಯ ಋಷಿಯಂತೆ ಸಮಸ್ತ ವಾಙ್ಮಯ ಸಮುದ್ರವನ್ನು ಕುಡಿದನು. ಸೋಮಚಂದ್ರನ ಶರೀರ ಸುವರ್ಣದಂತೆ ಹೊಳೆಯುತ್ತಿತ್ತು. ಚಂದ್ರನಂತೆ ಸುಂದರವಾಗಿತ್ತು. ಆದುದರಿಂದ ಅವನನ್ನು ಹೇಮಚಂದ್ರನೆಂದು ಕರೆಯಲಾಯಿತು. ಒಮ್ಮೆ ಸೋಮಚಂದ್ರಾಚಾರ್ಯರು ಶಕ್ತಿ ಪ್ರದರ್ಶನಾರ್ಥವಾಗಿ ತಮ್ಮ ಬಾಹುವನ್ನು ಅಗ್ನಿಯಲ್ಲಿಟ್ಟಾಗ ಅದು ಬಂಗಾರದ ಬಣ್ಣವಾಯಿತೆಂದೂ ಅದರಿಂದ ಅವರು ಹೇಮಚಂದ್ರರೆಂದು ಹೆಸರು ಪಡೆದವರೆಂಬ ಕಥೆಯೂ ಸಹ ಇದೆ.

ದೀಕ್ಷೆಯ ತರುವಾಯ ಸೋಮಚಂದ್ರರ ಅಧ್ಯಯನ ಪ್ರಾರಂಭವಾಯಿತು. ಸ್ವಲ್ಪ ಕಾಲದಲ್ಲೇ ಅವರು ಆ ಯುಗದ ಮಹಾವಿದ್ಯೆಗಳಾದ ತರ್ಕ, ವ್ಯಾಕರಣ, ದರ್ಶನ ಮತ್ತು ಸಾಹಿತ್ಯ ವಿಷಯಗಳಲ್ಲಿ ಪೂರ್ಣಾಧಿಕಾರವನ್ನು ಪಡೆದುಕೊಂಡರು.

ಜೊತೆಗೆ ತಮ್ಮ ಗುರು ದೇವಚಂದ್ರರೊಡನೆ ನಾನಾ ದೇಶಗಳನ್ನು ಸುತ್ತಿ ಶಾಸ್ತ್ರ ಮತ್ತು ವ್ಯವಹಾರ ಜ್ಞಾನಗಳೆರಡರಲ್ಲೂ ಪರಿಣತಿಯನ್ನು ಪಡೆದರು. ದೇವಚಂದ್ರರು ಸ್ವತಃ ಮಹಾವಿದ್ವಾಂಸರಾಗಿದ್ದರು. ಅವರು ಸ್ಥಾನಾಂಗ ಸೂತ್ರದ ಮೇಲೆ ಟೀಕೆಯನ್ನು ಹಾಗೂ ಶಾಂತಿನಾಥ ಚರಿತೆಯನ್ನು ರಚಿಸಿ ಪ್ರಸಿದ್ಧರಾಗಿದ್ದರು. ಇಂಥ ಗುರುಗಳ ಪಾದ ಮೂಲದಲ್ಲಿ ಕುಳಿತು ಅಭ್ಯಾಸ ಮಾಡಿದ ಹೇಮಚಂದ್ರರು ವಿದ್ಯೆಯಲ್ಲಿ ನಿಷ್ಣಾತರಾದರು. ನಿಪುಣರಾದರು. ತಮ್ಮ ೨೧ನೇ ವಯಸ್ಸಿನಲ್ಲಿಯೇ ಸಮಸ್ತ ಶಾಸ್ತ್ರಗಳನ್ನು ಕರತಲಾಮಲಕ ಮಾಡಿಕೊಂಡರು.

ದೇವಚಂದ್ರರೇ ಹೇಮಚಂದ್ರರ ಶಿಕ್ಷಾ ಗುರುವಾಗಿದ್ದರೂ ಅವರು ಇತರರಲ್ಲಿಯೂ ವಿದ್ಯಾಭ್ಯಾಸ ಮಾಡಿದರು. ಕಾಶ್ಮೀರದವರೆಗೂ ಅವರು ಪ್ರಯಾಣ ಮಾಡಿದರೆಂಬ ಹೇಳಿಕೆಯಿದೆ. ಆಗ ಕಾಶ್ಮೀರ ವಿದ್ಯಾಕೇಂದ್ರವಾಗಿತ್ತು. ಅಭಿನವಗುಪ್ತ, ಮಮ್ಮಟ ಮೊದಲಾದ ಸಂಸ್ಕೃತ ದಿಗ್ಗಜಗಳು ಅಂದು ಕಾಶ್ಮೀರದಲ್ಲಿದ್ದರು. ಅಲ್ಲಿ ಬ್ರಾಹ್ಮೀದೇವಿ ವಿದ್ಯೆಯ ಅಧಿಷ್ಠಾನದೇವಿಯೆಂದು ಪ್ರಸಿದ್ಧಳಾಗಿದ್ದಳು. ವಿದ್ಯಾರ್ಜನೆಗಾಗಿ ತವಕ ಪಡುತ್ತಿದ್ದ ಹೇಮಚಂದ್ರರು ಕಾಶ್ಮೀರದ ಕಡೆ ಯಾತ್ರೆಯನ್ನು ಆರಂಭಿಸಿದರು. ಆದರೆ ಮಾರ್ಗ ಮಧ್ಯೆಯಲ್ಲಿ ನೇಮಿನಾಥರ ಪುಣ್ಯಭೂಮಿ ರೈವತಗಿರಿಗೆ ಬಂದಾಗ ಅಲ್ಲಿಯೇ ಯೋಗ ಸಾಧನೆಯನ್ನು ಆರಂಭಿಸಿದರು. ಆಗ ಶಾರದಾದೇವಿ ಪ್ರಸನ್ನಳಾಗಿ ಹೇಮಚಂದ್ರರಿಗೆ 'ವತ್ಸ ! ನಿನ್ನ ಸಮಸ್ತ ಮನೋಕಾಮನೆಗಳೂ ಈಡೇರಿವೆ. ಪ್ರತಿವಾದಿಗಳನ್ನು ಜಯಿಸುವ ಶಕ್ತಿಯು ನಿನಗೆ ಪ್ರಾಪ್ತವಾಗಿದೆ. ನೀನು ಕಾಶ್ಮೀರದವರೆಗೂ ಪ್ರಯಾಣ ಮಾಡುವ ಆವಶ್ಯಕತೆ ಇಲ್ಲ' - ಎಂದುಹೇಳಿ ಅವರಿಗೆ ಅಭಯವನ್ನಿತ್ತಳು. ಈ ರೀತಿ ದೇವಿಯ ಕೃಪೆಯಿಂದ ಹೇಮಚಂದ್ರರು ಸಿದ್ಧ ಸಾರಸ್ವತರಾದರು. ಇದಾದ ತರುವಾಯ ಹೇಮಚಂದ್ರರು ನಾನಾ ದೇಶಗಳಲ್ಲಿ ಸಂಚರಿಸಿ ಧಾರ್ಮಿಕ ಜಾಗೃತಿಯನ್ನುಂಟು ಮಾಡಿದರು. ಕ್ರಿ.ಶ ೧೧೦೯ ರಲ್ಲಿ ನಾಗಪುರದ ಧನದನೆಂಬ ವಣಿಕನು ಹೇಮಚಂದ್ರರಿಗೆ ಸೂರಿ ಪದವಿ ನೀಡುವ ಮಹೋತ್ಸವವನ್ನು ವ್ಯವಸ್ಥೆ ಮಾಡಿದನು. ಅಂದಿನಿಂದ ಅವರು ಸ್ವತಂತ್ರವಾಗಿ ವ್ಯಾಖ್ಯಾನ ಮಾಡಲು ಆರಂಭಿಸಿದರು. ತಮ್ಮ ಗುರುವಿನ ಉತ್ತರಾಧಿಕಾರಿಯೆಂದು ಪರಿಗಣಿತರಾದರು. ಈ ಸಂದರ್ಭದಲ್ಲಿಯೇ ಹೇಮಚಂದ್ರರ ತಾಯಿ ಪಾಹಿಣಿಯು ಆರ್ಯಿಕಾ ದೀಕ್ಷೆಯನ್ನು ತೆಗೆದುಕೊಂಡಳು. ಈ ನೂತನ

ಆಚಾರ್ಯರ ವಿದ್ವತ್ತು, ತೇಜಸ್ಸು ಪ್ರತಿಭೆ ಮತ್ತು ಗುಣಗಳು ಎಲ್ಲರನ್ನೂ ಅವರತ್ತ ಆಕರ್ಷಿಸಿದವು.

## ರಾಜಾಶ್ರಯ

ಆಚಾರ್ಯರಾಗುವ ಮುನ್ನವೇ ವಿದ್ಯೆಯ ಪ್ರಾಪ್ತಿಗಾಗಿ ಅಣಹಿಲಪುರಕ್ಕೆ ಆಗಾಗ್ಗೆ ಬಂದು ಹೋಗುವ ಪರಿಪಾಟ ಹೇಮಚಂದ್ರರಿಗಿತ್ತು. ಆಗ ಸಿದ್ಧರಾಜ ಜಯಸಿಂಹ ಗುಜರಾತನ್ನು ಆಳುತ್ತಿದ್ದನು. ಇವನು ಕ್ರಿ.ಶ. ೧೦೯೩ರಲ್ಲಿ ಪಟ್ಟಕ್ಕೆ ಬಂದನು. ಅತುಲ ಪರಾಕ್ರಮಿಯೂ, ಮಹತ್ವಾಕಾಂಕ್ಷಿಯೂ ಆದ ಸಿದ್ಧರಾಜ ಉಜ್ಜಯಿನಿ ಮತ್ತು ಸೌರಾಷ್ಟ್ರಗಳನ್ನು ವಶಪಡಿಸಿಕೊಂಡು ಪೂರ್ವ ಪಶ್ಚಿಮಗಳ ಕಡೆಗೆ ತನ್ನ ರಾಜ್ಯವನ್ನು ವಿಸ್ತರಿಸಿದನು.

ಒಮ್ಮೆ ಜಯಸಿಂಹನು ಪಟ್ಟದಾನೆಯ ಮೇಲೆ ರಾಜ ಬೀದಿಯಲ್ಲಿ ಹೋಗುತ್ತಿದ್ದಾಗ ಅವನನ್ನು ನೋಡಲು ಜನ ಜಾತ್ರೆಯಂತೆ ಸೇರಿತು. ಆನೆ ಮುಂದೆ ಹೋಗದೆ ಜನಸಂದಣಿಯ ಮಧ್ಯೆ ಸಿಕ್ಕಿಕೊಂಡಿತು. ಆಗ ಹೇಮಚಂದ್ರರು ಸಿದ್ಧರಾಜನನ್ನು ಶ್ಲೇಷೆಯಿಂದ ಹೊಗಳಿ ಆನೆಯನ್ನು ಹಿಂತೆಗೆದುಕೊಂಡು ಹೋಗುವಂತೆ ಹೇಳಿದರು. ಆಚಾರ್ಯರ ಈ ಶ್ಲೋಕವನ್ನು ಕೇಳಿ ರಾಜನು ಪ್ರಸನ್ನನಾದನು. ಮುನಿಯ ಪ್ರಶಾಂತ ಮುಖ ಮುದ್ರೆಯಯನ್ನು ನೋಡಿ ಆಕರ್ಷಿತನಾಗಿ ಆನೆಯಿಂದಿಳಿದು ಬಂದು ಅವರಿಗೆ ನಮಸ್ಕರಿಸಿ ಅವರನ್ನು ಅರಮನೆಗೆ ಆಗಮಿಸಿ ತನಗೆ ದರ್ಶನವಿತ್ತು ಆಶೀರ್ವದಿಸಬೇಕೆಂದು ಪ್ರಾರ್ಥಿಸಿಕೊಂಡನು. ಅವರು ತಮ್ಮ ವಿದ್ಯೆ, ಬುದ್ಧಿ ಮತ್ತು ಚಾರಿತ್ರ ಬಲದಿಂದ ರಾಜನ ಹೃದಯವನ್ನು ಗೆದ್ದರು. ತಮ್ಮ ಪಾಂಡಿತ್ಯ, ದೂರದರ್ಶಿತ್ವ ಹಾಗೂ ಸರ್ವಧರ್ಮ ಪ್ರೇಮಗಳಿಂದ ರಾಜಸಭೆಯಲ್ಲಿ ತಮ್ಮ ಪ್ರಭಾವವನ್ನು ಹೆಚ್ಚಿಸಿಕೊಂಡರು.

ಕ್ರಿ.ಶ. ೧೧೩೬ರಲ್ಲಿ ಸಿದ್ಧರಾಜನು ಮಾಳವ ದೇಶದ ಮೇಲೆ ವಿಜಯವನ್ನು ಪ್ರಾಪ್ತ ಮಾಡಿಕೊಂಡು ಯಶೋಧರ್ಮರಾಜನನ್ನು ಬಂಧಿಸಿ ತಂದಾಗ ಎಲ್ಲರ ಪ್ರತಿನಿಧಿಯಾಗಿ ಹೇಮಚಂದ್ರರು ಅವನಿಗೆ ಹಾರ್ದಿಕ ಸ್ವಾಗತ ನೀಡಿದರು. ಈ ರೀತಿ ಬುಧಜನ ಚೂಡಾಮಣಿಯಾದ ಹೇಮಚಂದ್ರರು ಹಾಗೂ ಭುವನ ಪ್ರಸಿದ್ಧನಾದ ಸಿದ್ಧರಾಜನ ಮಧ್ಯೆ ಸಂಪೂರ್ಣ ಸಹಮತವಿತ್ತು ; ಅನ್ಯೋನ್ಯತೆಯಿತ್ತು. ಸಿದ್ಧರಾಜ

ಅನ್ಯಮತೀಯನಾದರೂ ಹೇಮಚಂದ್ರರ ಉಪದೇಶದಿಂದ ಜೈನ ಧರ್ಮದಲ್ಲಿ ಅನುರಕ್ತನಾಗಿದ್ದನು. ಅವರ ಪ್ರಭಾವದಿಂದ ಸಿದ್ಧಪುರದಲ್ಲಿ ಮಹಾವೀರ ಮಂದಿರವನ್ನು ನಿರ್ಮಿಸಿದನು ಮತ್ತು ಅಲ್ಲಿ ನಾಲ್ಕು ಜಿನಪ್ರತಿಮೆಗಳಿಂದ ಕೂಡಿದ ಸಿದ್ಧವಿಹಾರವನ್ನೂ ಕಟ್ಟಿಸಿದನು.

ಕ್ರಿ.ಶ. ೧೧೩೪ ರಿಂದ ೧೧೪೨ ರವರೆವಿಗೆ ಸಿದ್ಧರಾಜನ ಸಂಗಡ ಹೇಮಚಂದ್ರರ ಸಂಬಂಧ ಅತ್ಯಂತ ನಿಕಟವಾಗಿತ್ತು. ಈ ಎಂಟು ವರ್ಷಗಳಲ್ಲಿ ಹೇಮಚಂದ್ರರ ಅನೇಕ ಅಪೂರ್ವ ಕೃತಿಗಳು ಲಭ್ಯವಾದವು. ಶಬ್ದಾನುಶಾಸನ ಅವರ ಮೊದಲನೇ ವ್ಯಾಕರಣ ಗ್ರಂಥವಾಗಿದೆ. ಸಿದ್ಧರಾಜನ ಪ್ರೇರಣೆಯ ಮೇಲೆ ಇದು ಭೋಜನ ವ್ಯಾಕರಣಕ್ಕೆ ಪ್ರತಿ ಸ್ಪರ್ಧಿಯಾಗಿ ಹುಟ್ಟಿತು. ಮಾಳವ ಯುದ್ಧದ ವಿಜಯೋತ್ಸವವನ್ನು ಆಚರಿಸಿದ ಕೆಲವು ಕಾಲದ ತರುವಾಯ ಉಜ್ಜಯಿನಿಯಲ್ಲಿ ಪ್ರಾಪ್ತವಾದ ಹಸ್ತಲಿಖಿತ ಗ್ರಂಥವನ್ನು ಆಸ್ಥಾನ ಪಂಡಿತರಿಗೆ ತೋರಿಸಲಾಯಿತು. ಶಬ್ದೋತ್ಪತ್ತಿಯ ಈ ಗ್ರಂಥ ಪರಮಾರರ ಭೋಜನಿಂದ ರಚಿತವಾದುದೆಂದೂ ಅವನು ಎಲ್ಲ ವಿಷಯಗಳ ಮೇಲೂ ಗ್ರಂಥಗಳನ್ನು ರಚನೆ ಮಾಡಿದ್ದಾನೆಂದೂ ಪ್ರಶಂಸಿಸಿದರು. ಈ ಹೊಗಳಿಕೆ ಸಿದ್ಧರಾಜನಿಗೆ ಹಿಡಿಸಲಿಲ್ಲ, ತನ್ನ ರಾಜ್ಯದ ಗ್ರಂಥ ಭಂಡಾರಗಳಲ್ಲಿ ಇಂಥ ಗ್ರಂಥ ಇಲ್ಲವಲ್ಲ ಎಂದು ಖೇದ ವ್ಯಕ್ತಪಡಿಸಿದನು. ಅಲ್ಲಿದ್ದ ವಿದ್ವಾಂಸರೆಲ್ಲ ಹೇಮಚಂದ್ರರೊಬ್ಬರೇ ಇಂಥ ಗ್ರಂಥ ರಚನೆ ಮಾಡುವ ಸಾಮರ್ಥ್ಯ ಹೊಂದಿರುವವರು ಎಂದು ತಿಳಿಸಿದರು. ಆಗ ಹೊಸ ವ್ಯಾಕರಣವನ್ನು ರಚಿಸುವಂತೆ ಸಿದ್ಧರಾಜನು ಹೇಮಚಂದ್ರರಿಗೆ ಸೂಚಿಸಿದನು. ಇದರ ಫಲವೇ ಹೇಮಚಂದ್ರರ ಶಬ್ದಾನುಶಾಸನ ಗ್ರಂಥ.

ಸಿದ್ಧರಾಜ ಸ್ವತಃ ವಿದ್ವಾಂಸನಾಗಿದ್ದನು. ಅವನ ಆಸ್ಥಾನ ಪಂಡಿತರಿಂದ ಶೋಭಿಸುತ್ತಿತ್ತು. ಸಿದ್ಧಾಂತದ ಅನೇಕ ಅನುಮಾನಗಳನ್ನು ಅವನೇ ಪರಿಹರಿಸುತ್ತಿದ್ದನು. ಧರ್ಮದ ಚರ್ಚೆಗಳನ್ನು ಕೇಳುವುದೆಂದರೆ ಅವನಿಗೆ ಹಬ್ಬವಾಗಿತ್ತು. ಒಮ್ಮೆ ಎಲ್ಲ ವಿದ್ವಾಂಸರನ್ನೂ ಕೂಡಿಸಿ, ಈ ಸಂಸಾರ ಸಾಗರದಿಂದ ಪಾರಾಗುವ ಮಾರ್ಗ ಯಾವುದೆಂದು ರಾಜನು ಕೇಳಲಾಗಿ ಎಲ್ಲರೂ ತಮ್ಮ ತಮ್ಮ ಧರ್ಮವನ್ನು ಮುಂದೆ ಮಾಡಿ ಪರಮತಗಳನ್ನು ದೂಷಿಸಿದರು. ಆದರೆ ಹೇಮಚಂದ್ರರಾದರೋ ಪುರಾಣದಲ್ಲಿ ಬರುವ ಶಾಂಬನ ಆಖ್ಯಾನವನ್ನು ವಿವರಿಸಿ "ಯಾವ ರೀತಿ ಹುಲ್ಲು,

ಎಲೆ, ರೆಂಬೆ ಕೊಂಬೆಗಳು ಬೇರೆ ಬೇರೆಯಾಗಿ ದೊರಕಿದರೂ ಎತ್ತಾಗಿದ್ದ ಶಾಂಬ ಮನುಷ್ಯನಾಗಲಿಲ್ಲವೋ ಅದೇ ರೀತಿ ನಾನಾ ಧರ್ಮಗಳು ತಮ್ಮ ತಮ್ಮ ದೃಷ್ಟಿಗಳನ್ನೇ ಮುಂದೆ ಮಾಡಿ ಸತ್ಯ ಧರ್ಮವನ್ನು ವಿಕೃತಗೊಳಿಸುತ್ತಿವೆ. ಆದರೆ ಯಶೋಮತಿ ಮರದಲ್ಲಿದ್ದ ರೆಂಬೆ, ಕಾಂಡ, ಎಲೆ ಮೊದಲಾದವುಗಳನ್ನೆಲ್ಲ ಕಡಿದು ಎತ್ತಿಗೆ ಹಾಕಿದಾಗ ಅದರಲ್ಲಿದ್ದ ಔಷಧವೂ ಎತ್ತಿನ ಹೊಟ್ಟೆಯೊಳಕ್ಕೆ ಹೋಗಿ ಅದು ಪುನಃ ಮನುಷ್ಯನಾದಂತೆ ಎಲ್ಲ ಧರ್ಮಗಳನ್ನೂ ತಿಳಿಯುವುದರಿಂದ ಶುದ್ಧ ಧರ್ಮವನ್ನು ತಿಳಿದಂತಾಗುತ್ತದೆ. ಸತ್ಯ, ಅಹಿಂಸಾ, ಅಚೌರ್ಯ, ಬ್ರಹ್ಮಚರ್ಯ ಹಾಗೂ ಅಪರಿಗ್ರಹಗಳನ್ನು ಪಾಲಿಸುವುದು ಸಮಸ್ತ ಧರ್ಮಗಳ ಸಾರವೆಂದು ಹೇಳಿದರು. ಸಮಸ್ತ ಸಭಾ ಸದಸ್ಯರೂ ಮುಗ್ಧರಾದರು. ಸಿದ್ಧರಾಜನಂತೂ ಅತ್ಯಂತ ಸಂತೋಷಗೊಂಡನು. ಹೇಮಚಂದ್ರರಿಂದ ಸಿದ್ಧರಾಜ ವಿಶೇಷವಾಗಿ ಪ್ರಭಾವಿತನಾದನು. ಇದರಿಂದ ತನ್ನ ರಾಜ್ಯದಲ್ಲಿ ಪ್ರತಿವರ್ಷ ೮೦ ದಿನಗಳು ಪ್ರಾಣಿವಧೆ ಆಗದಂತೆ ಶಾಸನ ಹೊರಡಿಸಿದನು. ರಾಜನು ಸರ್ವಧರ್ಮಗಳ ಆರಾಧನೆ ಮಾಡುತ್ತಿದ್ದನು. ಅವನ ರಾಜ್ಯದಲ್ಲಿ, ವೈದಿಕ ಹಾಗೂ ಜೈನ ಧರ್ಮಗಳು ಅನ್ಯೋನ್ಯವಾಗಿ ಅಭಿವೃದ್ಧಿಗೊಂಡವು. ಜೈನ ಧರ್ಮದ ಪ್ರಸಾರದಲ್ಲಿ ಸಿದ್ಧರಾಜನ ತಾಯಿ ಮಯಣ್ಣಲ್ಲಾ ದೇವಿಯ ಪಾತ್ರ ವಿಶೇಷವಾಗಿತ್ತು. ಅವಳು ಸ್ವಯಂ ಜೈನಳಾಗಿದ್ದಳು. ಅದೇರೀತಿ ಸಿದ್ಧಸೇನ, ದಿವಾಕರಸೇನ, ಉದಯನ ಮೊದಲಾದ ಮಂತ್ರಿಗಳೂ ಜೈನ ಧರ್ಮಾವಲಂಬಿಗಳಾಗಿದ್ದರು.

ಈ ರೀತಿ ಸಿದ್ಧರಾಜ ಜಯಸಿಂಹನು ನಲವತ್ತೆಂಟು ವರ್ಷಗಳವರೆಗೆ ಆದರ್ಶವಾಗಿ ರಾಜ್ಯಭಾರ ಮಾಡಿದನು. ಈತನು ಸ್ವರ್ಗಸ್ಥನಾದಾಗ ಹೇಮಚಂದ್ರರಿಗೆ ೫೪ ವರ್ಷ ವಯಸ್ಸಾಗಿತ್ತು.

## ಕುಮಾರಪಾಲ ಹಾಗೂ ಹೇಮಚಂದ್ರರು

ಸಿದ್ಧರಾಜನಿಗೆ ಮಕ್ಕಳಿರಲಿಲ್ಲ, ಆದ್ದರಿಂದ ಅವನ ಮೃತ್ಯುವಿನಂತರ ರಾಜಗದ್ದುಗೆಗಾಗಿ ಜಗಳವಾಯಿತು. ಕೊನೆಗೆ ಕ್ರಿ. ಶ. ೧೧೪೨ರಲ್ಲಿ ಕುಮಾರಪಾಲನು ರಾಜ್ಯಾಭಿಷಕ್ತನಾದನು. ಸಿದ್ಧರಾಜ ಜಯಸಿಂಹನು ತನ್ನ ಜೀವಿತ ಕಾಲದಲ್ಲಿ ಕುಮಾರಪಾಲನನ್ನು ಹೀನ ಕುಲದವನೆಂದು ಕೊಲ್ಲಲು ಪ್ರಯತ್ನಿಸಿದ್ದನು.

ಆಗ ಕುಮಾರಪಾಲನು ಪ್ರಾಣ ಉಳಿಸಿಕೊಳ್ಳಲು ಗುಪ್ತ ವೇಷ ಧಾರಣೆ ಮಾಡಿಕೊಂಡು ಸ್ತಂಭ ತೀರ್ಥಕ್ಕೆ ಬಂದನು. ಅಲ್ಲಿ ಹೇಮಚಂದ್ರಾಚಾರ್ಯರನ್ನೂ, ಉದಯನನನ್ನೂ ಭೇಟಿಯಾದನು. "ಹೇ ಪ್ರಭು ! ಈ ರೀತಿ ಕಷ್ಟಗಳನ್ನು ಅನುಭವಿಸುವಂತೆಯೇ ನನ್ನ ಹಣೆಯಲ್ಲಿ ಬರೆದಿದೆಯೇ ಅಥವಾ ಒಳ್ಳೆಯದೇನಾದರೂ ಆಗುತ್ತದೆಯೇ" ಎಂದು ಹೇಮಚಂದ್ರಾಚಾರ್ಯರನ್ನು ದೈನ್ಯದಿಂದ ಕೇಳಿದನು. ಆಗ ಸೂರೀಶ್ವರಾಚಾರ್ಯರು "ಮಾರ್ಗಶಿರ ಬಹುಳ ಚತುರ್ದಶಿಗೆ ನೀನು ರಾಜಗದ್ದುಗೆ ಏರುವೆ !" ಎಂದು ಭವಿಷ್ಯ ನುಡಿದರು. ಆ ಮುನಿವಚನವನ್ನು ಕೇಳಿ ಕುಮಾರಪಾಲನಿಗೆ ಅಪಾರ ಸಂತೋಷವಾಯಿತು. "ನಿಮ್ಮ ವಚನ ಸತ್ಯವಾದರೆ ನಿಮ್ಮನ್ನೇ ಈ ಪೃಥ್ವಿಗೆ ಒಡೆಯರನ್ನಾಗಿ ಮಾಡುವೆ ಹಾಗೂ ನಾನು ನಿಮ್ಮ ಸೇವಕನಾಗಿ ಕೆಲಸ ಮಾಡುವೆ" ಎಂದು ಹೇಳಿದನು. ಅದಕ್ಕೆ ಆಚಾರ್ಯರು, "ನಿನ್ನ ರಾಜ್ಯದಿಂದ ಸನ್ಯಾಸಿಗಳಾದ ನಮಗೇನಾಗಬೇಕಾಗಿದೆ. ನೀನು ರಾಜನಾಗಿ ಜೈನ ಧರ್ಮದ ಸೇವೆ ಮಾಡುವುದಾದರೆ ಅದೇ ನಮಗೆ ಪರಮ ಸಂತೋಷವಾಗುತ್ತದೆ" ಎಂದು ನುಡಿದರು.

ಅತ್ತ ಸಿದ್ಧರಾಜನ ಗೂಢಾಚಾರರು ಕುಮಾರಪಾಲನನ್ನು ಹುಡುಕುತ್ತ ಸ್ತಂಭತೀರ್ಥಕ್ಕೆ ಬಂದರು. ಹೇಮಚಂದ್ರಾಚಾರ್ಯರು ಅವನನ್ನು ತಮ್ಮ ಉಪಾಶ್ರಯ (ಮುನಿಗಳ ವಸತಿಗೃಹ)ದ ನೆಲಮಾಳಿಗೆಯಲ್ಲಿ ಬಚ್ಚಿಟ್ಟು ಅದರ ದ್ವಾರವನ್ನು 'ಓಲೆಗರಿ ಪುಸ್ತಕಗಳಿಂದ ಮುಚ್ಚಿ ಅವನ ಪ್ರಾಣವನ್ನು ರಕ್ಷಿಸಿದರು. ಹೀಗೆ ಸಂರಕ್ಷಿಸಲ್ಪಟ್ಟ ಕುಮಾರಪಾಲನು ಸಿದ್ಧರಾಜನ ಕಾಲಾನಂತರ ಹೇಮಚಂದ್ರರ ಭವಿಷ್ಯವಾಣಿಯಂತೆ ಸಿಂಹಾಸನವನ್ನೇರಿದನು. ಕುಮಾರಪಾಲನನ್ನು ರಾಜನನ್ನಾಗಿ ಮಾಡಲು ಉದಯನನ ಮಕ್ಕಳು ಪ್ರಮುಖ ಪಾತ್ರ ವಹಿಸಿದರು.

ಕುಮಾರಪಾಲನು ರಾಜ್ಯಾಭಿಷಿಕ್ತನಾದ ಮೇಲೆ ರಾಜ್ಯವನ್ನು ಸುವ್ಯವಸ್ಥೆಗೊಳಿಸಿದನು. ಇನ್ನು ಧರ್ಮ ಮತ್ತು ಸಾಹಿತ್ಯ ಆಸಕ್ತಿ ತೋರಿಸಲು ಆರಂಭಿಸಿದನು. ಕುಮಾರಪಾಲನು ರಾಜನಾದಮೇಲೆ ಹೇಮಚಂದ್ರಾಚಾರ್ಯರು ಕರ್ಣಾವತಿಯಿಂದ ಅಣಹಿಲವಾಡಕ್ಕೆ ಆಗಮಿಸಿದರು. ಉದಯನ ಮಂತ್ರಿ ಅವರನ್ನು ಸ್ವಾಗತಿಸಿದನು. "ರಾಜನು ನಮ್ಮನ್ನು ನೆನಸಿಕೊಳ್ಳುತ್ತಾನೊ ಇಲ್ಲವೋ" ಎಂದು

ಆಚಾರ್ಯರು ಉದಯನನ್ನು ಕೇಳಿದರು. "ಇಲ್ಲ ನೆನೆಸಿಕೊಳ್ಳುವುದಿಲ್ಲ" ಎಂದು ಆತ ಸ್ಪಷ್ಟವಾಗಿ ಹೇಳಿದ. ಬಹುಶಃ ರಾಜ್ಯವನ್ನು ಸುವ್ಯವಸ್ಥೆಯಲ್ಲಿಡುವ ಹಾಗೂ ಶತ್ರುಗಳನ್ನು ಸದೆ ಬಡಿಯುವ ವಿಚಾರದಲ್ಲಿ ಮಗ್ನನಾಗಿರಬೇಕೆಂದು ತಿಳಿದು ಆಚಾರ್ಯರು, ಚಿಂತೆಯಿಲ್ಲ, 'ಈ ರಾತ್ರಿ ತನ್ನ ಹೊಸ ರಾಣಿಯ ಅರಮನೆಗೆ ಹೋಗದಂತೆ ನಿಮ್ಮ ರಾಜನಿಗೆ ತಿಳಿಸಿ' ಎಂದು ಉದಯನನಿಗೆ ಹೇಳಿದರು. ಅದೇ ರೀತಿ ಕುಮಾರಪಾಲನಿಗೆ ವಿಷಯವನ್ನು ತಿಳಿಸಲಾಯಿತು. ರಾತ್ರಿ ಅರಮನೆಗೆ ಸಿಡಿಲು ಬಡಿದು ರಾಣಿ ಮೃತ್ಯುವಶಳಾದಳು.

ಈ ಚಮತ್ಕಾರ ಘಟನೆಯಿಂದ ವಿಸ್ಮಿತನಾಗಿ ಈ ವಿಷಯವನ್ನು ತಿಳಿಸಿದ ಆ ಮಹಾತ್ಮರಾರೆಂದು ರಾಜ ಮಂತ್ರಿಯನ್ನು ಕೇಳಿದನು. ರಾಜನ ಒತ್ತಾಯದ ಮೇಲೆ ಹೇಮಚಂದ್ರಾಚಾರ್ಯರ ಹೆಸರನ್ನು ಹಾಗೂ ಅವರ ಆಗಮನದ ವೃತ್ತಾಂತವನ್ನು ತಿಳಿಸಿದನು. ರಾಜನು ಆನಂದಿತನಾಗಿ ಆಚಾರ್ಯರನ್ನು ತನ್ನ ಅರಮನೆಗೆ ಆಹ್ವಾನಿಸಿದನು. ಸೂರೀಶ್ವರರು ಆಗಮಿಸಿದರು. ರಾಜನು ಸಕಲ ಮರ್ಯಾದೆಗಳೊಡನೆ ಅವರನ್ನು ಎದುರುಗೊಂಡನು, ಸ್ವಾಗತಿಸಿದನು. "ಪ್ರಭು ! ಹಿಂದೆ ನನ್ನ ಪ್ರಾಣವನ್ನು ರಕ್ಷಿಸಿದಿರಿ ! ಈಗಲೂ ಎರಡನೇ ಬಾರಿ ನನ್ನ ಜೀವವನ್ನು ಉಳಿಸಿದಿರಿ. ಈ ರಾಜ್ಯವನ್ನು ನೀವೇ ತೆಗೆದುಕೊಳ್ಳಿ. ನಾನು ನಿಮ್ಮ ಸೇವೆ ಮಾಡಿಕೊಂಡಿರುತ್ತೇನೆ" ಎಂದನು. ಅದಕ್ಕೆ "ರಾಜನ್ ಕೃತಜ್ಞತೆಗೆ ಪ್ರತ್ಯುಪಕಾರ ಮಾಡಬೇಕೆಂದಿದ್ದರೆ ತಾವು ಜೈನಧರ್ಮವನ್ನು ಸ್ವೀಕರಿಸಿ ಅದನ್ನು ಪ್ರಸಾರ ಮಾಡಿ. ಅದಕ್ಕಿಂತ ಹೆಚ್ಚಿನ ಕಾಣಿಕೆ ನಮಗೆ ಬೇಕಿಲ್ಲ" ಎಂದರು ಆಚಾರ್ಯರು. ರಾಜನು ಕೂಡಲೇ ಸೂರೀಶ್ವರರ ಆಜ್ಞೆಯನ್ನು ಪಾಲಿಸಲು ನಿಶ್ಚಯಿಸಿದನು. ಕ್ರಿ.ಶ. ೧೧೫೯ ರಲ್ಲಿ ಕುಮಾರಪಾಲನು ಶ್ರಾವಕವ್ರತಗಳನ್ನು ಸ್ವೀಕರಿಸಿದನು. ಅದರಲ್ಲಿ ಮೊದಲನೇ ಅಹಿಂಸಾಣು ವ್ರತವನ್ನು ಅವನು ಕೈಗೊಂಡ ದೃಶ್ಯವನ್ನು ಮೇರುತುಂಗಾಚಾರ್ಯರು ತಮ್ಮ ಪ್ರಬಂಧ ಚಿಂತಾಮಣಿಯಲ್ಲಿ ಅತ್ಯಂತ ರೋಚಕವಾಗಿ ದೃಶ್ಯರೂಪದಲ್ಲಿ ಹೀಗೆ ವರ್ಣಿಸಿದ್ದಾರೆ "ಅಹಿಂಸೆಯೆಂಬ ರಾಜಕನ್ಯೆ ಹೇಮಚಂದ್ರರ ಆಶ್ರಯದಲ್ಲಿ ಬೆಳೆದು ದೊಡ್ಡವಳಾಗಿದ್ದಳು. ಇವಳು ಇತರ ರಾಜರ ಅಧಾರ್ಮಿಕಾಚರಣೆಗಳನ್ನು ನೋಡಿ ಯಾರೊಡನೆಯೂ ವಿವಾಹವಾಗಲು

ಇಷ್ಟಪಡಲಿಲ್ಲ. ಹೇಮಚಂದ್ರರ ಶಿಷ್ಯ ಕುಮಾರಪಾಲನ ಧರ್ಮಭಾವನೆಯನ್ನು ನೋಡಿ ಮುಗ್ಧಳಾಗಿ ಗುರುಗಳ ಆದೇಶದಂತೆ ಅವನನ್ನು ಮದುವೆಯಾದಳು.''

ಕುಮಾರಪಾಲನು ಹೇಮಚಂದ್ರರ ಪ್ರಭಾವದಿಂದ ರಾಜ್ಯದಲ್ಲೆಲ್ಲ ಅಹಿಂಸಾ ವಾತಾವರಣವನ್ನು ನಿರ್ಮಿಸಿದನು. ಅವನು ೧೪ ವರ್ಷಗಳು ಪಶುವಧೆ ನಿಷೇಧದ ಶಾಸನವನ್ನು ತಂದನೆಂದು ಗುಜರಾತಿನ ಅನೇಕ ಶಾಸನಗಳು ಹೇಳುತ್ತವೆ. ಪಶುವಧೆಯಂತೆ ಮಾಂಸಾಹಾರ, ಅಸತ್ಯ ಭಾಷಣ, ದ್ಯೂತ ವ್ಯಸನ, ವೇಶ್ಯಾಗಮನ, ಪರಧನ ಅಪಹರಣ, ಮದ್ಯಪಾನ ಮೊದಲಾದವುಗಳನ್ನು ನಿಷೇಧ ಮಾಡಿದನು.

ಕುಮಾರಪಾಲನ ಕಾಲದಲ್ಲಿ ಜೈನಧರ್ಮ ಚರಮ ಸೀಮೆಯನ್ನು ಮುಟ್ಟಿತು. ಅವನು ಅನೇಕ ಜಿನಮಂದಿರಗಳನ್ನು, ವಿಹಾರಗಳನ್ನೂ ಕೆರೆ ಕಟ್ಟೆಗಳನ್ನೂ ಧರ್ಮಶಾಲೆಗಳನ್ನು ಕಟ್ಟಿಸಿದನು. ಸುಮಾರು ೧೪೦೦ ವಿಹಾರಗಳನ್ನು ಅವನು ನಿರ್ಮಿಸಿದನು. ಅವುಗಳಲ್ಲಿ ದೀಕ್ಷಾವಿಹಾರ, ತ್ರಿಭುವನತಿಲಕ ವಿಹಾರ ಮತ್ತು ಕುಮಾರಪಾಲನ ವಿಹಾರಗಳು ಮುಖ್ಯವಾದವು. ವಿಶಾಲ ಹಾಗೂ ಗಗನ ಚುಂಬಿತ ಶಿಖರದಿಂದ ಕೂಡಿದ ತಾರಂಗ ತೀರ್ಥದ ಅಜಿತನಾಥ ಭಗವಾನರ ಮಂದಿರ ಮತ್ತು ಇತರೆ ಮಂದಿರಗಳನ್ನೂ ನಿರ್ಮಿಸಿದನು. ಮಂತ್ರಿವಾಹಡನ ಸಲಹೆ ಮೇಲೆ ಅಜಿತನಾಥಸ್ವಾಮಿ ಪ್ರತಿಮಾ ಸ್ಥಾಪನಾ ಸಮಾರಂಭವನ್ನು ಮಾಡಿದನು. ಇದರ ವಿಧಿ ಗಳನ್ನು ಸ್ವಯಂ ಹೇಮಚಂದ್ರಾಚಾರ್ಯರೆ ನಡೆಸಿದರು. ಪರಿಣಾಮವಾಗಿ ಕುಮಾರಪಾಲನಿಗೆ ಯುದ್ಧದಲ್ಲಿ ಜಯ ಲಭಿಸಿತು. ಇದೇ ರೀತಿ ರಾಜನು ಸಾವಿರಾರು ಜಿನ ಮಂದಿರಗಳನ್ನು ಜೀರ್ಣೋದ್ಧಾರಮಾಡಿದನು. ಸೋಮನಾಥ ಮಂದಿರ ಇವನ ಕಾಲದಲ್ಲಿ ಜೀರ್ಣೋದ್ಧಾರವಾಯಿತು. ಇವನು ಏಳು ದೊಡ್ಡ ತೀರ್ಥಯಾತ್ರೆಗಳನ್ನು ಮಾಡಿದನು ಮತ್ತು ಒಂಬತ್ತು ಲಕ್ಷ ರತ್ನಗಳನ್ನು ದೇವರಿಗೆ ಅರ್ಪಿಸಿದನು. ಶತ್ರುಂಜಯ ತೀರ್ಥದ ಅಭಿವೃದ್ಧಿಗೆ ೧ ಕೋಟಿ ೩೦ ಲಕ್ಷರೂ. ಗಳನ್ನು ವ್ಯಯ ಮಾಡಿದನು. ಗಿರಿನಾರು ಮಹಾ ತೀರ್ಥಕ್ಕೆ ಹೋಗಲು ಮೆಟ್ಟಿಲುಗಳನ್ನು ಮಾಡಿಸಿದನು.

ಕುಮಾರಪಾಲನ ಪ್ರಾರ್ಥನೆಯ ಮೇಲೆ ಹೇಮಚಂದ್ರರು ಯೋಗಶಾಸ್ತ್ರ ವೀತರಾಗಸ್ತೋತ್ರ ಮತ್ತು ತ್ರಿಷಷ್ಠಿ ಶಲಾಕಾಪುರುಷ ಚರಿತೆ ಪುರಾಣಗಳನ್ನು

ರಚಿಸಿದರು. ಸಂಸ್ಕೃತ ಮತ್ತು ಪ್ರಾಕೃತ ದ್ವಯಾಶ್ರಯಗಳು ಇವನ ಕಾಲದಲ್ಲಿಯೇ ರಚಿತವಾದವು. ಪ್ರಮಾಣಮೀಮಾಂಸವೂ ಈಗಲೇ ಬರೆಯಲ್ಪಟ್ಟಿತು. ಕುಮಾರಪಾಲನು ಏಳುನೂರು ಲಿಪಿಕಾರರನ್ನು ಕರೆಸಿ ಹೇಮಚಂದ್ರಾಚಾರ್ಯರ ಗ್ರಂಥಗಳನ್ನೆಲ್ಲ ಲಿಪಿ ಮಾಡಿಸಿದನು. ಆಚಾರ್ಯರ ಸುತ್ತ ಯಾವಾಗಲೂ ಒಂದು ನೂರು ಶಿಷ್ಯರು ಇರುತ್ತಿದ್ದರು. ಅವರು ಗುರುವಚನವನ್ನು ಲಿಪಿ ಮಾಡಿಕೊಂಡು ಹೋಗುತ್ತಿದ್ದರು. ಕುಮಾರಪಾಲನು ಹೇಮಚಂದ್ರರ ಸಾಹಿತ್ಯ ಸೃಷ್ಟಿಗೆ ಸಹಾಯವಾಗಲೆಂದು ಸುಮಾರು ಇಪ್ಪತ್ತೊಂದು ದೊಡ್ಡ ಗ್ರಂಥ ಭಂಡಾರಗಳನ್ನು ಸ್ಥಾಪಿಸಿದನು.

## ಹೇಮಚಂದ್ರರ ಸಾಹಿತ್ಯ ಜೀವನ

ಹೇಮಚಂದ್ರರು ಜೈನ ಧರ್ಮವನ್ನು ಪ್ರಸಾರ ಮಾಡುವುದು ಮತ್ತು ಕುಮಾರಪಾಲನಿಗೆ ಉಪದೇಶ ನೀಡುವುದರೊಂದಿಗೆ ಸಾಹಿತ್ಯ ನಿರ್ಮಾಣ ಕಾರ್ಯವನ್ನೂ ಕೈಗೊಂಡರು. ಅವರು ಆರು ಸಾವಿರ ಶ್ಲೋಕಗಳಲ್ಲಿ ಶಬ್ದಾನುಶಾಸನವನ್ನು ಪೂರ್ತಿ ಮಾಡಿ ಹದಿನೆಂಟು ಸಾವಿರ ಶ್ಲೋಕಗಳಲ್ಲಿ ಅದರ ಬೃಹದ್ ವೃತ್ತಿಯನ್ನು ರಚಿಸಿದರು. ಒಬ್ಬನೇ ವ್ಯಕ್ತಿಯ ವ್ಯಾಕರಣ ಶಾಸ್ತ್ರದ ಈ ಉಪಾಸನೆ ನಿಜಕ್ಕೂ ಆಶ್ಚರ್ಯಕರವಾಗಿದೆ. ಇದರೊಡನೆ ಪುರಾಣ, ಕಾವ್ಯ, ದರ್ಶನ, ಕೋಶ, ಛಂದಸ್ಸು ಈ ವಿಷಯಗಳ ಮೇಲೆ ಇವರು ರಚಿಸಿದ ಗ್ರಂಥಗಳನ್ನು ಜೋಡಿಸಿದರೆ ಅವರ ಪ್ರತಿಭೆಯನ್ನು ಕಂಡು ನಾವು ಬೆಕ್ಕಸಬೆರಗಾಗುತ್ತೇವೆ. ಶ್ರದ್ಧೆಯಿಂದ ನಮ್ಮ ತಲೆಗಳು ಅವರಿಗೆ ಬಾಗುತ್ತವೆ.

ಆಚಾರ್ಯರಿಗೆ ಅತ್ಯಂತ ಕುಶಾಗ್ರಮತಿಯಿತ್ತು. ಹಾಗೆಯೇ ಧಾರ್ಮಿಕ ಉದಾರತೆಯೂ ಇತ್ತು. ಒಮ್ಮೆ ಕುಮಾರಪಾಲನ ಮುಂದೆ ಮತ್ಸರಿಯೊಬ್ಬನು ಜೈನರು ಸೂರ್ಯನಾರಾಯಣನನ್ನು ನಂಬುವುದಿಲ್ಲ ಮತ್ತು ಪೂಜಿಸುವುದಿಲ್ಲ ಎಂದು– ಕಟಕಿಯಾಡಿದನು. ಕೂಡಲೇ– ಹೇಮಚಂದ್ರರು –

**ಆ–ಧಾಮ ಧಾಮ ಧಾಮ್ನೈದವಯಮೇವ ಹೃಧಿಸ್ಥಿತಮ್ ।**
**ಯಸ್ಯಾಸ್ಯ ವ್ಯಸನೇಂ ಪ್ರಾಪ್ತೇ ತ್ಯಜಾವೋಂ ಭೋಜನೋದಕ ।।**

ನಾವು ಜೈನರು ಬೆಳಕಿನ ಮನೆಯಾದ ಸೂರ್ಯನಾರಾಯಣನನ್ನು ನಮ್ಮ ಹೃದಯಗಳಲ್ಲಿಯೇ ಇಟ್ಟುಕೊಂಡಿದ್ದೇವೆ. ಅವನು ಅಸ್ತಂಗತನಾದಾಗ ಆಗುವ ವ್ಯಸನವನ್ನು ತೋರಿಸಲು ಅನ್ನ ನೀರುಗಳನ್ನು ತ್ಯಾಗ ಮಾಡಿಬಿಡುತ್ತೇವೆಂದು ಉತ್ತರಿಸಿದರು. ಮತ್ಸರಿಯು ಬಾಯಿ ಮುಚ್ಚಿ ಕುಳಿತನಂತೆ. ಇನ್ನೊಮ್ಮೆ ಕಾಶಿಯ ವಿಶ್ವೇಶ್ವರನೆಂಬ ಕವಿ ಪಾಟಣಕ್ಕೆ ಬಂದು ಕುಮಾರಪಾಲನ ಸಭೆಯಲ್ಲಿ ವ್ಯಂಗ್ಯವಾಗಿ ಹೇಮಚಂದ್ರನನ್ನು ಕುರಿತು ಕಂಬಳಿ ಮತ್ತು ದಂಡಗಳನ್ನು ಹೊಂದಿರುವ ಹೇಮಗೋಪಾಲ ಎಂದು ಹೇಳಿ ಸುಮ್ಮನಾದನು. ತನ್ನ ಗುರುಗಳ ಬಗ್ಗೆ ಆಡಿದ ಈ ನಿಂದಾತ್ಮಕ ಮಾತುಗಳಿಂದ ಕುಮಾರಪಾಲ ಕೋಪಗೊಂಡನು. ಆದರೆ ಹೇಮಚಂದ್ರರು ಆ ಶ್ಲೋಕವನ್ನು ಪೂರ್ಣಗೊಳಿಸಿ, ಆ ಗೋಪಾಲನು ಷಡ್‌ದರ್ಶನಗಳೆಂಬ ಪಶುಗಳನ್ನು ಜೈನದರ್ಶನವೆಂಬ ಹುಲ್ಲುಗಾವಲಿನಲ್ಲಿ ಮೇಯಿಸುತ್ತಾನೆ ಎಂದರು. ಇದನ್ನು ಕೇಳಿದ ಸಭಾ ಸದಸ್ಯರೆಲ್ಲ ಸಂತೋಷಪಟ್ಟರು.

## ಸರ್ವಧರ್ಮ ಸಹಿಷ್ಣುತೆ

ಹೇಮಚಂದ್ರಾಚಾರ್ಯರು ಸರ್ವಧರ್ಮಗಳಲ್ಲಿಯೂ ಸಹಿಷ್ಣುತಾ ಭಾವವನ್ನು ಹೊಂದಿದ್ದರು. ಒಮ್ಮೆ ದೇವ ಪಟ್ಟಣದ ಪುಜಾರಿಗಳು ಬಂದು ಕುಮಾರಪಾಲನಿಗೆ ಸೋಮನಾಥ ಮಂದಿರದ ಜೀರ್ಣೋದ್ಧಾರ ಕೆಲಸವಾಗಬೇಕೆಂದು ಪ್ರಾರ್ಥಿಸಿಕೊಂಡರು. ಆಗ ಕುಮಾರಪಾಲ ತನ್ನ ಗುರು ಹೇಮಚಂದ್ರರ ಸಲಹೆಯನ್ನು ಕೇಳಿದನು. ಅದಕ್ಕೆ ಆಚಾರ್ಯರು ರಾಜನು ಬ್ರಹ್ಮಚರ್ಯವ್ರತದಿಂದಿದ್ದು ದೇವತಾರ್ಚನೆ ಮಾಡಬೇಕೆಂದೂ ಮತ್ತು ಮಂದಿರದ ಧ್ವಜಾರೋಹಣವಾಗುವವರೆಗೂ ಮದ್ಯಮಾಂಸಗಳನ್ನು ತ್ಯಾಗ ಮಾಡಬೇಕೆಂದು ತಿಳಿಸಿದರು. ಕುಮಾರಪಾಲನು ಸೂರೀಶ್ವರಾಚಾರ್ಯರ ಸಲಹೆಯಂತೆ ಆ ವ್ರತವನ್ನು ಸ್ವೀಕರಿಸಿದನು.

ಸೋಮನಾಥ ಯಾತ್ರೆಗೆ ರಾಜನು ಆಚಾರ್ಯರನ್ನೂ ಆಹ್ವಾನಿಸಿದನು. "ಹೇಗೆ ಹಸಿದವರಿಗೆ ಊಟಕ್ಕೆ ಆಹ್ವಾನ ಬೇಕಿಲ್ಲವೋ ಹಾಗೆ ನಾವು ಮುನಿಗಳಿಗೆ ತೀರ್ಥಯಾತ್ರೆಗೆ ಆಹ್ವಾನಬೇಕಿಲ್ಲ" ಎಂದು ಹೇಳಿ ಅದನ್ನು ತಕ್ಷಣ ಸ್ವೀಕರಿಸಿದರು. ಕುಮಾರಪಾಲನು ಆಚಾರ್ಯರನ್ನು ತನ್ನೊಡನೆ ವಾಹನದಲ್ಲಿ ಬರುವಂತೆ

ಪ್ರಾರ್ಥಿಸಿದನು. ಆದಕ್ಕೆ ಅವರು ಜೈನ ಮುನಿಯಾದವನಿಗೆ ವಾಹನದಲ್ಲಿ ಸಂಚರಿಸುವುದನ್ನು ನಿಷೇಧಿಸಲಾಗಿರುವುದರಿಂದ ತಾವು ಕಾಲ್ನಡಿಗೆಯಲ್ಲಿಯೇ ಬರುವುದಾಗಿಯೂ ಮತ್ತು ಜಾಗ್ರತೆ ಹೊರಟು ದಾರಿಯಲ್ಲಿ ಸಿಗುವ ಶತ್ರುಂಜಯ, ಗಿರಿನಾರ ತೀರ್ಥಗಳನ್ನು ದರ್ಶಿಸಿ ಬರುವುದಾಗಿಯೂ ತಿಳಿಸಿದರು. ಆದರಂತೆ ಅವರು ದೇವಪಟ್ಟಣದ ಪುರಪ್ರವೇಶ ಮಾಡುವ ವೇಳೆಗೆ ಅಲ್ಲಿ ಉಪಸ್ಥಿತರಿದ್ದರು. ಕುಮಾರಪಾಲನು ಬಹಳ ಭಕ್ತಿಯಿಂದ ಸೋಮನಾಥನ ಲಿಂಗಪೂಜೆಯನ್ನು ಮಾಡಿದನು. ಮತ್ತು ಆಚಾರ್ಯರು ಅವರ ಧರ್ಮಕ್ಕೆ ಲೋಪ ಬರದಿದ್ದರೆ ಸೋಮನಾಥನನ್ನು ಪೂಜಿಸುವಂತೆ ಬೇಡಿಕೊಂಡನು. ಆಗ ಹೇಮಚಂದ್ರರು ಆಹ್ವಾನ, ಅವಗುಂಠನ ಮುದ್ರ, ನ್ಯಾಸ ವಿಸರ್ಜನಾದಿ ಕ್ರಮಗಳಿಂದ ಮತ್ತು ಪಂಚೋಪಚಾರ ವಿಧಿಗಳಿಂದ ಶಿವ ಪೂಜೆಯನ್ನು ಮಾಡಿ–

ಭವಬಿಜಾಂಕುರಜನನಾರಾಗಾಧ್ಯ:ಕ್ಷಮುಮುಸಾಗತಾಯಸ್ಯ।
ಬ್ರಹ್ಮಾವಾವಿಷ್ಣುವಾಹರೋಜಿನಾವಾನಮಸ್ತಸ್ಮಾ॥

(ಹೇ ದೇವ! ಜನನ ಮರಣ ರೂಪಿ ಸಂಸಾರವನ್ನು ಯಾರು ಜಯಿಸಿದ್ದಾನೋ, ಯಾರು ರಾಗ ದ್ವೇಷಗಳನ್ನು ನಷ್ಟಗೊಳಿಸಿದ್ದಾನೋ ಅಂಥವನನ್ನು ಬ್ರಹ್ಮ ವಿಷ್ಣು ಶಿವ, ಜಿನ, ಎಂಬ ಯಾವ ಹೆಸರಿನಿಂದ ಕರೆದರೂ ಅವನನ್ನು ಪೂಜಿಸಿದಂತಾಗುವುದು. ಅಂಥ ಭಗವಂತನಿಗೆ ನಾನು ನಮಸ್ಕರಿಸುತ್ತೇನೆ) ಎಂದು ಸ್ತುತಿ ಮಾಡಿದರು. ಇಷ್ಟೇ ಅಲ್ಲದೆ ಕುಮಾರಪಾಲನಿಗೆ ಅವರು ಸಾಕ್ಷಾತ್ ಶಿವದರ್ಶನ ಮಾಡಿಸಿದರಂತೆ, ಆಗ ಕುಮಾರಪಾಲನಿಗೆ ಹೇಮಚಂದ್ರರಲ್ಲಿದ್ದ ಭಕ್ತಿ ಮತ್ತೂ ಹೆಚ್ಚಾಯಿತು. ಅವರು ದೇವತಾ ಪುರುಷರೂ, ತ್ರಿಕಾಲ ಜ್ಞಾನಿಗಳೂ ಆಗಿದ್ದಾರೆ ಹಾಗೂ ಅವರ ಉಪದೇಶ ಮೋಕ್ಷ ಮಾರ್ಗವನ್ನು ತಿಳಿಸಿಕೊಡುವಂತಾದ್ದಾಗಿದೆ ಎಂದು ಅರಿತನು.

ಕುಮಾರಪಾಲನು ಪ್ರಾಣಿವಧೆಯ ನಿಷೇಧವನ್ನು ರಾಜ್ಯದಾದ್ಯಂತ ಮಾಡಿದ್ದನು. ಆತನ ಕುಲದೇವಿ ಶ್ರೀಕಂಠೇಶ್ವರಿ ದೇವಿಯ ಮಂದಿರದಲ್ಲಿ ಪಶುಬಲಿಯಾಗುತ್ತಿತ್ತು. ಆಷಾಢದ ಶುಕ್ಲ ಪಕ್ಷ ಬಂದಾಗ ಸಪ್ತಮಿ ಅಷ್ಟಮಿ ನವಮಿಗಳಂದು ಒಟ್ಟು ೨೪೦೦ ಪಶುಗಳು ಹಾಗೂ ೨೪ ಎಮ್ಮೆಗಳನ್ನು ರಾಜ್ಯದ

ಪರವಾಗಿ ದೇವಿಗೆ ಬಲಿ ಕೊಡಬೇಕೆಂದು ರಾಜನನ್ನು ಅರ್ಚಕರು ಪ್ರಾರ್ಥಿಸಿದರು. ರಾಜನು ಹೇಮಚಂದ್ರರಲ್ಲಿಗೆ ಹೋಗಿ ಈ ಪ್ರಾಚೀನ ಕುಲಾಚಾರವನ್ನು ವಿವರಿಸಿದನು.

ಆಗ ಆಚಾರ್ಯರು ಈ ದುಷ್ಟಪದ್ಧತಿಯನ್ನು ಹೋಗಲಾಡಿಸಬೇಕೆಂದೂ ಅಹಿಂಸೆ ಕೇವಲ ಮನುಷ್ಯರಿಗೇ ಅಲ್ಲದೆ ಮೂಕ ಪ್ರಾಣಿಗಳಿಗೂ ಅನ್ವಯಿಸುತ್ತದೆಂಬುದನ್ನೂ ತಿಳಿಸಿ, ಆ ಪ್ರಾಣಿಗಳನ್ನು ಬಿಡಿಸುವ ಉಪಾಯವೊಂದನ್ನು ಅವನಿಗೆ ಹೇಳಿಕೊಟ್ಟರು. ಅನಂತರ ರಾಜನು ಪಶುಗಳನ್ನೆಲ್ಲ ಮಂದಿರದಲ್ಲಿ ಕೂಡಿ ಬೀಗ ಹಾಕಿ ಪಹರೆ ಇಡಿಸಿದನು. ಪ್ರಾತಃಕಾಲ ಕುಮಾರಪಾಲ ಸ್ವತಃ ಆಗಮಿಸಿ ಬೀಗ ತೆಗೆಸಿದನು. ಅಲ್ಲಿ ಪಶುಗಳೆಲ್ಲ ಆನಂದದಿಂದ ಮಲಗಿದ್ದವು. ಇವುಗಳನ್ನೆಲ್ಲ ನಾನು ದೇವಿಗೆ ಸಮರ್ಪಿಸಿದ್ದೆ, ಆದರೆ ದೇವಿಯು ಒಂದು ಪಶುವನ್ನೂ ಮುಟ್ಟಿಲ್ಲ, ಆದ್ದರಿಂದ ಆಕೆಗೆ ಮಾಂಸ ರುಚಿಸುವುದಿಲ್ಲವೆಂದು ಗೊತ್ತಾಗುತ್ತದೆ. ಇವೆಲ್ಲ ನಿಮ್ಮ ಮಾತುಗಳೇ ವಿನಃ ಅವಳ ಅಪೇಕ್ಷೆಯಲ್ಲ ಎಂದು ಆ ಪುರೋಹಿತರಿಗೆ ತಿಳಿಸಿ ಪಶುಗಳನ್ನೆಲ್ಲ ಬಂಧನದಿಂದ ಬಿಡಿಸಿದನು. ಅವು ಸ್ವತಂತ್ರವಾಗಿ ಆನಂದದಿಂದ ಓಡಿಹೋದವು.

ಆದರೆ ರಾತ್ರಿ ಸ್ವಪ್ನದಲ್ಲಿ ಕಂಟೇಶ್ವರಿ ರಾಜನಿಗೆ ಕಾಣಿಸಿಕೊಂಡು ಶಾಪಕೊಟ್ಟಳಂತೆ. ಇದರಿಂದ ಅವನಿಗೆ ಕುಷ್ಠರೋಗ ಪ್ರಾಪ್ತವಾಯಿತು. ಆಗ ದೇವಿಗೆ ಮಾಮೂಲಿನಂತೆ ಬಲಿಕೊಡಲು ಮಂತ್ರಿಗಳು ಸಲಹೆ ನೀಡಿದರು. ಆದರೆ ರಾಜನು ತನ್ನ ಪ್ರಾಣ ಹೋದರೂ ಚಿಂತೆಯಿಲ್ಲ, ಯಾವ ಪ್ರಾಣಿಯನ್ನೂ ವಧೆ ಕೊಡಲು ಇಚ್ಛಿಸುವುದಿಲ್ಲವೆಂಬ ನಿರ್ಧಾರವನ್ನು ವ್ಯಕ್ತಪಡಿಸಿದನು. ಇದು ಹೇಮಚಂದ್ರರಿಗೆ ತಿಳಿಯಿತು. ಆಗ ಅವರು ಜಲವನ್ನು ಮಂತ್ರಿಸಿ ಉದಯನನ ಕೈಗೆ ಕೊಟ್ಟು ರಾಜನ ಮೇಲೆ ಪ್ರೋಕ್ಷಿಸುವಂತೆ ಹೇಳಿದರು. ಇದರಿಂದ ರಾಜನಿಗೆ ತನ್ನ ಮೊದಲಿನ ಸುಂದರರೂಪ ಬಂದಿತು.

ಕುಮಾರಪಾಲನ ಮೇಲೆ ಹೇಮಚಂದ್ರಚಾರ್ಯರಿಗೆ ಎಷ್ಟು ಗಾಢವಿಶ್ವಾಸ ವಿತ್ತೆಂದರೆ ಅವರು ತಮ್ಮ ಮಹಾವೀರ ಚರಿತೆಯಲ್ಲಿ ತೀರ್ಥಂಕರ ವೀರಪ್ರಭುವಿನಿಂದ ಅವನ ರಾಜ ವೈಭವವನ್ನು ಮತ್ತು ಅವನ ಗುಣಗಳನ್ನು ಈ ರೀತಿ ವರ್ಣಿಸುತ್ತಾರೆ –

"ಹೇ ಅಭಯ ಕುಮಾರ ! ನನ್ನ ನಿರ್ವಾಣವಾದ ೧೬೬೯ ವರ್ಷಗಳ ತರುವಾಯ ಅಣಹಿಲವಾಡನಗರದಲ್ಲಿ ಚಾಳುಕ್ಯವಂಶದ ಚಂದ್ರ ಭುಜಬಲ ಕುಮಾರಪಾಲ ಅಖಂಡ ಶಾಸನವನ್ನು ಮಾಡುವನು. ಅವನು ದಾನಿಯೂ ಧಾರ್ಮಿಕನೂ ಯುದ್ಧ ವೀರನೂ ಪ್ರಜಾಸಂರಕ್ಷಕನೂ, ಕುಶಲನೂ, ಋಜು ಸ್ವಭಾವದವನೂ, ಕ್ಷಮಾವಂತನೂ ಆಗಿ ಬಹಳ ಕಾಲ ರಾಜ್ಯಭಾರ ಮಾಡುವನು. ಈ ರಾಜನು ಆಚಾರ್ಯ ಹೇಮಚಂದ್ರರಿಂದ ಸಮ್ಯಕ್ತ್ವ ಧರ್ಮವನ್ನು ಕೇಳಿ ಪ್ರಸನ್ನನಾಗಿ ಶ್ರಾವಕ ಧರ್ಮವನ್ನು ಸ್ವೀಕರಿಸಿ ಸದಾ ಧರ್ಮ ಗೋಷ್ಠಿಗಳಲ್ಲಿ ಕಾಲ ಕಳೆಯುವನು"- ಈ ರೀತಿ ಆಚಾರ್ಯರು ಕುಮಾರಪಾಲನಲ್ಲಿದ್ದ ತಮ್ಮ ಗೌರವಾದರಗಳನ್ನು ತೋರಿಸಿದ್ದಾರೆ. ಹೇಮಚಂದ್ರರನ್ನು ಎಲ್ಲ ಧರ್ಮದವರೂ ಗೌರವಿಸುತ್ತಿದ್ದರು. ಶೈವ ಮಠಾಧಿಪತಿ ಗಂಡಬೃಹಸ್ಪತಿ ಅವರಿಂದ ಪ್ರಭಾವಿತರಾದವರಲ್ಲೂ ಒಬ್ಬನಾಗಿದ್ದನು. ಹೀಗಿದ್ದರೂ ಹೇಮಚಂದ್ರರು ಅಂಧಶ್ರದ್ಧೆಯಿಂದ ತಮ್ಮ ಧರ್ಮದ ಪಕ್ಷಪಾತಿಯಾಗಿರಲಿಲ್ಲ. ಶ್ರೀ ಮಹಾವೀರ ಸ್ತುತಿಯಲ್ಲಿನ -

**ಶ್ರದ್ಧಯೈವತ್ವಯಿ ಪಕ್ಷಪಾತೋನ**
**ದ್ವೇಷ ಮಾತ್ರಾದರೂಚಿ ಪರೇಷಾಮ್ ॥**
**ಯಥಾವದಾಪ್ತಾ ತಾತ ಪರೀಕ್ಷಾಯ**
**ಚಾತ್ವಾಮೇವ ವಂದೇ ಪ್ರಭುಮಾಶ್ರಿತಾಸ್ಮ॥**

ಹೇ ವೀರ ಪ್ರಭು ! ಕೇವಲ ಶ್ರದ್ಧೆಯಿಂದಲೇ ನಾನು ನಿಮ್ಮ ಪಕ್ಷಪಾತಿಯಲ್ಲ. ಮತ್ತು ಯಾವ ದ್ವೇಷದಿಂದಲೂ ಅನ್ಯರಲ್ಲಿ ಅರುಚಿಯನ್ನು ಹೊಂದಿಲ್ಲ. ಮಂತ್ರ ಮತ್ತು ಆಗಮಗಳ ಜ್ಞಾನವನ್ನು ತಿಳಿದು ಅವುಗಳ ಯಥಾರ್ಥ ಪರೀಕ್ಷೆಯ ನಂತರವೇ ನಾನು ನಿಮ್ಮ ಶರಣು ಬಂದಿದ್ದೇನೆ ಎಂದಿದ್ದಾರೆ. ಇದರಿಂದ ಹೇಮಚಂದ್ರರು ಕೇವಲ ಭಾವಪ್ರಧಾನರಾಗಿರದೆ ಬುದ್ಧಿ ಪ್ರಧಾನರೂ ಆಗಿದ್ದರೆಂಬುದು ಗೊತ್ತಾಗುತ್ತದೆ.

ವೃದ್ಧಾವಸ್ಥೆಯಲ್ಲಿ ಹೇಮಚಂದ್ರರು ತೀವ್ರ ರೋಗಕ್ಕೆ ಗುರಿಯಾಗಿದ್ದರೂ ಅಷ್ಟಾಂಗ ಯೋಗಾಭ್ಯಾಸದಿಂದ ಅದನ್ನು ಗುಣಪಡಿಸಿಕೊಂಡರು. ಆದರೂ ಕ್ರಿ.ಶ.

೧೧೭೨ರಲ್ಲಿ ತಮ್ಮ ೮೪ನೇ ವಯಸ್ಸಿನಲ್ಲಿ ಸಮಾಧಿಮರಣವನ್ನಪ್ಪಿದರು. ಕುಮಾರಪಾಲನಿಗೆ ಇನ್ನು ಆರೇ ತಿಂಗಳು ಆಯಸ್ಸೆಂದು ತಿಳಿಸಿದ್ದರು.

ಹೇಮಚಂದ್ರರ ಮರಣ ವಾರ್ತೆಯನ್ನು ಕೇಳಿ ದೇಶದ ನಾನಾ ಭಾಗಗಳಿಂದ ಭಕ್ತರ ತಂಡಗಳು ಧಾವಿಸಿ ಬಂದವು. ಅವರೆಲ್ಲ ಗುರುವಿನ ಚಿತಾಭಸ್ಮವನ್ನು ಪಡೆದರು. ಅದಕ್ಕೆ ಎಷ್ಟು ಬೇಡಿಕೆಯಿತ್ತೆಂದರೆ ಆ ಸ್ಥಳದಲ್ಲಿ ಒಂದು ಹೊಂಡವೇ ನಿರ್ಮಾಣವಾಯಿತು. ಅದು ಹೇಮಕೊಂಡವೆಂದು ಈಗಲೂ ಪ್ರಸಿದ್ಧವಾಗಿದೆ. ಆಚಾರ್ಯರ ಸಮಾಧಿ ಮಂಟಪವನ್ನು ಶತ್ರುಂಜಯ ಪರ್ವತದಲ್ಲಿ ಸ್ಥಿರವಾಗಿ ಸ್ಥಾಪಿಸಲ್ಪಡಲಾಯಿತು. ಈಗಲೂ ಆ ಪರ್ವತ, ಮಹಾಯಾತ್ರಾ ಕೇಂದ್ರವಾಗಿದೆ.

ಹೇಮಚಂದ್ರಾಚಾರ್ಯರು ಸ್ವರ್ಗಸ್ಥರಾದ ಆರು ತಿಂಗಳಲ್ಲಿಯೇ ಕುಮಾರಪಾಲನೂ ಮೃತನಾದನು.

## ಹೇಮಚಂದ್ರರ ಕೃತಿಗಳು

ಆಡು ಮುಟ್ಟದ ಸೊಪ್ಪಿಲ್ಲವೆನ್ನುವಂತೆ ಹೇಮಚಂದ್ರರು ಬರೆಯದ ಸಾಹಿತ್ಯ ಪ್ರಕಾರವಿಲ್ಲವೆನ್ನಬಹುದು. ಪುರಾಣ, ಕಾವ್ಯ, ಸ್ತೋತ್ರ, ವ್ಯಾಕರಣ, ಛಂದಸ್ಸು ಅಲಂಕಾರ, ಕೋಶ, ನ್ಯಾಯ, ಯೋಗಶಾಸ್ತ್ರ- ಹೀಗೆ ಎಲ್ಲ ವಿಷಯಗಳ ಮೇಲೂ ಅವರು ಅಪೂರ್ವವಾದ ಗ್ರಂಥಗಳನ್ನು ಸೃಷ್ಟಿ ಮಾಡಿದ್ದಾರೆ. ಸಾಹಿತ್ಯದ ಸಂಪೂರ್ಣ ಇತಿಹಾಸವನ್ನು ಅವಲೋಕಿಸಿದಾಗ ಸಂಖ್ಯೆಯಲ್ಲಿ ಹಾಗೂ ವಿವಿಧ ವಿಷಯಗಳ ಮೇಲೆ ಇವರಷ್ಟು ಕೃತಿಗಳನ್ನು ರಚಿಸಿದ ಮತ್ತೊಬ್ಬ ಸಾಹಿತಿಯನ್ನು ಕಾಣುವುದು ದುರ್ಲಭವಾಗಿದೆ. ಅವರ ಮಹತ್ವಪೂರ್ಣವಾದ ಗ್ರಂಥಗಳು ಹೀಗಿವೆ :

ಪುರಾಣ : ತ್ರಿಷಷ್ಟಿಶಲಾಕಾಪುರುಷ ಚರಿತ. ಇದರಲ್ಲಿ ೨೪ ತೀರ್ಥಂಕರರು, ೧೨ ಚಕ್ರವರ್ತಿಗಳು, ೯ ನಾರಾಯಣರು, ೯ ಪ್ರತಿ ನಾರಾಯಣರು ಹಾಗು ೯ ಬಲಭದ್ರರು ಈ ರೀತಿ ೬೩ ಶಲಾಕಾಪುರುಷರ ಚರಿತ್ರೆ ವರ್ಣಿತವಾಗಿದೆ. ಇದುಪುರಾಣ ಹಾಗೂ ಕಾವ್ಯಗಳೆರಡರ ದೃಷ್ಟಿಗಳಿಂದಲೂ ಉತ್ತಮ ಗ್ರಂಥವಾಗಿದೆ. ೩೨೦೦೦ ಶ್ಲೋಕ ಪ್ರಮಾಣವುಳ್ಳ ಈ ಅಪೂರ್ವಪುರಾಣ ಗ್ರಂಥದಲ್ಲಿ ತ್ರಿಲೋಕ, ದೇವರು, ಆತ್ಮ ಕರ್ಮ, ಧರ್ಮ, ದೃಷ್ಟಿ ಮೊದಲಾದ ವಿಷಯಗಳು

ವರ್ಣಿತವಾಗಿವೆ. ಇದರೊಡನೆ ಸೇರಿಸಿರುವ ಪರಿಶಿಷ್ಟ ಪರ್ವವಂತೂ ಭಾರತೀಯ ಇತಿಹಾಸದ ದೃಷ್ಟಿಯಿಂದ ಅತ್ಯಂತ ಉಪಯುಕ್ತವಾದುದಾಗಿದೆ.

ಕಾವ್ಯ : ಕಾವ್ಯವನ್ನು ಕೇವಲ ಆನಂದಾನುಭವಕ್ಕಾಗಿ ಮಾತ್ರ ರಚಿಸಬೇಕೆಂಬ ಗುಂಪಿಗೆ ಸೇರಿದವರಲ್ಲ ಹೇಮಚಂದ್ರರು. ಆದರಿಂದ ಧರ್ಮ ನೀತಿಗಳೂ ಪ್ರಸಾರವಾಗಬೇಕೆಂಬ ಆಶಯವುಳ್ಳ ಸಾಹಿತಿಯಾಗಿದ್ದರು ಅವರು. ಅವರ ದ್ವಯಾಶ್ರಯ ಕಾವ್ಯ ಸಂಸ್ಕೃತ ಹಾಗೂ ಪ್ರಾಕೃತಗಳೆರಡರಲ್ಲೂ ರಚಿತವಾಗಿದೆ. ಇದರಲ್ಲಿ ಚಾಳುಕ್ಯರಾಜರ ವಂಶಾವಳಿಯಿದೆ. ಸಿದ್ಧರಾಜ ಹಾಗೂ ಕುಮಾರಪಾಲರ ರಾಜ್ಯಾಡಳಿತದ ವಿಸ್ತಾರವಾದ ವರ್ಣನೆಯಿದೆ.

**ಸ್ತೋತ್ರ :** ಹೇಮಚಂದ್ರರು ರಚಿಸಿದ ಅನೇಕ ಸ್ತೋತ್ರ ಗ್ರಂಥಗಳಲ್ಲಿ **ದ್ವಾತ್ರಿಂಶಿಕಾ ವೀತರಾಗ ಸ್ತುತಿ ಹಾಗೂ ಮಹಾವೀರ ಸ್ತುತಿಗಳು ಮುಖ್ಯವಾದವು.**

ಇವುಗಳಲ್ಲಿ ಭಕ್ತಿಯ ಜೊತೆ ಅವರ ಸಮನ್ವಯ ಹಾಗೂ ವಿಶಾಲ ದೃಷ್ಟಿಕೋನಗಳನ್ನು ಕಾಣಬಹುದು. ಅವರು ಮಹಾವೀರರನ್ನು ಸ್ತುತಿಸುವಷ್ಟೇ ಶ್ರದ್ಧೆಯಿಂದ ಬುದ್ಧ ಕೇಶವ ಮತ್ತು ಮಹಾದೇವರನ್ನು ಸ್ತುತಿಸಿದ್ದಾರೆ. ಆದ್ದರಿಂದಲೇ ಸ್ತೋತ್ರ ಸಾಹಿತ್ಯದಲ್ಲಿ ಅವರಿಗೊಂದು ವಿಶಿಷ್ಟಸ್ಥಾನವಿದೆ.

ಛಂದಸ್ಸು : ಹೇಮಚಂದ್ರರು ಸಂಸ್ಕೃತ, ಪ್ರಾಕೃತ ಹಾಗೂ ಅಪಭ್ರಂಶ ಸಾಹಿತ್ಯಗಳ ಛಂದಸ್ಸಿನ ವಿಸ್ತಾರವಾದ ವರ್ಣನೆಯನ್ನು ತಮ್ಮ ಛಂದೋನುಶಾಸನದಲ್ಲಿ ಮಾಡಿದ್ದಾರೆ.

ಅಲಂಕಾರ : ಕಾವ್ಯಾನುಶಾಸನ ಹೇಮಚಂದ್ರರ ಅಲಂಕಾರ ಗ್ರಂಥ. ಇವರೇ ಸ್ವತಃ ಸೂತ್ರವನ್ನೂ, ಅಲಂಕಾರ ಚೂಡಾಮಣಿಯೆಂಬ ವೃತ್ತಿಯನ್ನೂ, ವಿವೇಕವೆಂಬ ಟೀಕೆಯನ್ನೂ ರಚಿಸಿದ್ದಾರೆ.

**ಕೋಶ :** ಅಭಿದಾನ ಚಿಂತಾಮಣಿ, ಅನೇಕಾರ್ಥ ಸಂಗ್ರಹ, ನಿಘಂಟು ಹಾಗೂ **ದೇಶೀನಾಮಮಾಲಾ** ಎಂಬ ನಾಲ್ಕು ಪ್ರಸಿದ್ಧ ನಿಘಂಟುಗಳನ್ನು ಹೇಮಚಂದ್ರರು ರಚಿಸಿದ್ದಾರೆ.

ನ್ಯಾಯ : ಪ್ರಮಾಣ ಮೀಮಾಂಸಾ ಎಂಬುದು ಹೇಮಚಂದ್ರರ ನ್ಯಾಯ ಗ್ರಂಥ.

ಯೋಗಶಾಸ್ತ್ರ : ಇದರಲ್ಲಿ ಜೈನ ದರ್ಶನದ ಜೊತೆಗೆ ಯೋಗವನ್ನೂ ಹೇಮಚಂದ್ರರು ಸಮನ್ವಯ ಮಾಡಲು ಪ್ರಯತ್ನಿಸಿದ್ದಾರೆ.

ವ್ಯಾಕರಣ : ಶಬ್ದಾನುಶಾಸನ ಸಂಸ್ಕೃತ ಪ್ರಾಕೃತ ಭಾಷೆಗಳೆರಡಕ್ಕೂ ಉಪಯುಕ್ತವಾದ' ಈ ಗ್ರಂಥ ೮೪,೦೦೦ ಶ್ಲೋಕ ಪ್ರಮಾಣವಿದೆ.

ಆಗಮ ಪ್ರಭಾಕರ ಮುನಿಶ್ರೀ ಪುಣ್ಯ ವಿಜಯಜೀಯವರ ಪ್ರಕಾರ ಹೇಮಚಂದ್ರರ ೨೫ ಕೃತಿಗಳಲ್ಲಿ ೨,೦೪,೮೪೪ ಶ್ಲೋಕ ಸಂಖ್ಯೆ ಪ್ರಮಾಣದ ಸಾಹಿತ್ಯ ರಚಿಸಿದ್ದಾರೆ.

ಅದರ ವಿವರ ಹೀಗಿದೆ : ೩೯,೮೩೮ ಶ್ಲೋಕ ಪ್ರಮಾಣದ ಪುರಾಣ ಹಾಗೂ ಇತಿಹಾಸ ಕಾವ್ಯ ಸಾಹಿತ್ಯ ; ೧,೨೨,೭೩೪ ಶ್ಲೋಕಗಳ ವ್ಯಾಕರಣ ಸಾಹಿತ್ಯ ; ೧,೫೯,೨೮ ಶ್ಲೋಕ ಸಂಖ್ಯೆಯ ಕೋಶ ಸಾಹಿತ್ಯ, ೬೮೦೦ ಶ್ಲೋಕ ಪ್ರಮಾಣದ ಅಲಂಕಾರ ಸಾಹಿತ್ಯ, ೩೦೦೦ ಶ್ಲೋಕದ ಛಂದಸ್ ಸಾಹಿತ್ಯ, ೧೬,೨೫೮ ಶ್ಲೋಕ ಪ್ರಮಾಣದ ದಾರ್ಶನಿಕ ಸಾಹಿತ್ಯ ಹಾಗೂ ೨೯೬ ಶ್ಲೋಕಗಳ ಸ್ತೋತ್ರ ಸಾಹಿತ್ಯ- ಹೀಗೆ ೨ ಲಕ್ಷಕ್ಕೂ ಹೆಚ್ಚು ಪ್ರಮಾಣದ ಸಾಹಿತ್ಯವನ್ನು ನಿರ್ಮಿಸಿದ ಶ್ರೇಯಸ್ಸು ಆಚಾರ್ಯ ಹೇಮಚಂದ್ರರಿಗೆ ಸಲ್ಲುತ್ತದೆ. ಮಹಾಭಾರತ ೧ ಲಕ್ಷ ಶ್ಲೋಕ ಪ್ರಮಾಣದ ಗ್ರಂಥ. ಆದರೆ ಹೇಮಚಂದ್ರರೊಬ್ಬರೇ ೧, ೨೨, ೭೩೪ ಶ್ಲೋಕ ಸಂಖ್ಯೆಯ ವ್ಯಾಕರಣ ಸಾಹಿತ್ಯವನ್ನೇ ಸೃಷ್ಟಿಸಿದ್ದಾರೆಂದರೆ ಅವರನ್ನು ಜ್ಞಾನ ರಾಕ್ಷಸನೆಂದು ಪ್ರೊ। ಪಾರೀಖರು ಕರೆದಿದ್ದರಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲವೆಂದು ಕಾಣುತ್ತದೆ.

ಹೀಗೆ ಸರಸ್ವತಿಯ ಸಿಹಿ ನೀರಿನ ಮಹಾಸಮುದ್ರವನ್ನೇ ಸೃಷ್ಟಿಸಿದ ಮಹಾತಪಸ್ವಿ, ಜ್ಞಾನಿ ಹೇಮಚಂದ್ರರು ಮುಂದಿನ ಪೀಳಿಗೆ ಜಿಜ್ಞಾಸೆಯ ತನ್ನ ಬಾಯಾರಿಕೆಯನ್ನು ತೀರಿಸಿಕೊಳ್ಳುವಂತೆ ಮಾಡಿಹೋಗಿದ್ದಾರೆ.

## ಹೇಮಚಂದ್ರರ ಶಿಷ್ಯಮಂಡಳಿ

ಹೇಮಚಂದ್ರರ ಶಿಷ್ಯ ಸಮುದಾಯ ತುಂಬ ದೊಡ್ಡದು. ರಾಮಚಂದ್ರಸೂರಿ, ಗುಣಚಂದ್ರಸೂರಿ, ಮಹೇಂದ್ರಸೂರಿ, ವರ್ಧಮಾನಗಣಿ, ದೇವಚಂದ್ರ, ಉದಯಚಂದ್ರ ಮತ್ತು ಯಶಶ್ಚಂದ್ರರು ಹೇಮಚಂದ್ರರ ಪ್ರಮುಖ ಶಿಷ್ಯರು. ಇವರಲ್ಲಿ ರಾಮಚಂದ್ರರು ಅಗ್ರಗಣ್ಯರು. ಅವರು ರಘುವಿಲಾಸ, ನಳವಿಲಾಸ, ವನಮಾಲಾ ಮೊದಲಾದ ನಾಟಕಗಳನ್ನೂ ಹಾಗೂ ಗುಣಚಂದ್ರರೊಡನೆ ನಾಟ್ಯದರ್ಪಣವನ್ನೂ ಬರೆದಿದ್ದಾರೆ. ಮಹೇಂದ್ರಸೂರಿಗಳು ಅಭಿಧಾನ ಚಿಂತಾಮಣಿ, ಅನೇಕಾರ್ಥಮಾಲಾ ಹಾಗೂ ದೇಶೀನಾಮಮಾಲಾಗಳ ಮೇಲೆ ವ್ಯಾಖ್ಯಾನ ಬರೆದಿದ್ದಾರೆ. ದೇವಚಂದ್ರ ಸೂರಿಗಳು ಚಂದ್ರಲೇಖಾ ವಿಜಯ ಪ್ರಕರಣವನ್ನೂ ಹಾಗೂ ಬಾಲಚಂದ್ರಗಣಿಗಳು ಸ್ನಾತಸ್ಯಾ ಎಂಬ ಕಾವ್ಯವನ್ನೂ ರಚಿಸಿದ್ದಾರೆ. ಈ ರೀತಿ ಮೇಧಾವಿ ಗುರುವಿಗೆ ತಕ್ಕಂಥ ಮೇಧಾವಿ ಶಿಷ್ಯ ಮಂಡಲಿ ಹೇಮಚಂದ್ರರದು.

## ಹೇಮಚಂದ್ರರಿಗೆ ನಮನಗಳು

ಹೇಮಚಂದ್ರರ ಪ್ರತಿಭೆಯನ್ನು ನೋಡಿ ಪಾಶ್ಚಾತ್ಯ ಹಾಗೂ ಪೌರ್ವಾತ್ಯ ವಿದ್ವಾಂಸರಿಬ್ಬರೂ ಚಕ್ಕಿತ ಬೆರಗಾಗಿದ್ದಾರೆ. ಅವರಿಗೆ ತಮ್ಮ ಅನಂತ ಪ್ರಣಾಮಗಳನ್ನು ಸಲ್ಲಿಸಿದ್ದಾರೆ. ಪಾಶ್ಚಾತ್ಯರು ಇವರನ್ನು ಜ್ಞಾನ ಸಾಗರವೆಂದು ಕರೆದರೆ, ಇಲ್ಲಿನವರು ಕಲಿಕಾಲ ಸರ್ವಜ್ಞನೆಂದಿದ್ದಾರೆ. ಪ್ರೊ. ಪಾರೀಖರು ಜ್ಞಾನ ರಾಕ್ಷಸ (Intellectual giant) ಎಂದರೆ, ಕುಲಪತಿ ಕೆ.ಎಂ. ಮುನ್ಶಿಯವರು ಗುಜರಾತಿನ ಚೇತನದಾತಾ ಎಂದು ಉದ್ಗಾರಿಸಿದ್ದಾರೆ. ಮುನ್ಶಿ ಅವರು ಮುಂದುವರಿದು ಯಾವ ಸಾಹಿತ್ಯ ಪ್ರಣಾಳಿಕೆಯನ್ನು ಇವರು ಸ್ಥಾಪಿಸಿದರೋ ಐತಿಹಾಸಿಕ ದೃಷ್ಟಿಕೋನವನ್ನು ಬೆಳೆಸಿದರೋ, ಏಕತಾ ಭಾವನೆಯನ್ನು ಪೋಷಿಸಿದರೋ ಅದರ ಅಡಿಪಾಯದ ಮೇಲೆ ಮಹಾ ಗುಜರಾತಿನ ಮಂದಿರವನ್ನು ನಿರ್ಮಾಣ ಮಾಡಬೇಕಾಗಿದೆ ಎಂದು ಕಳಕಳಿ ವ್ಯಕ್ತಪಡಿಸಿದ್ದಾರೆ. ಸೂರ್ಯೋದಯ ಸಮಯದಲ್ಲಿ ಸರಸ್ವತಿ ನದಿಯ ದಂಡೆಯ ಮೇಲೆ ಒಂದು ಮಹಾ ಶಕ್ತಿ ತನ್ನ ಪ್ರಕಾಶದಿಂದ, ತೇಜಸ್ಸಿನಿಂದ ಇಡೀ ಗುಜರಾತನ್ನು ಆವರಿಸಿದೆಯೆಂದು ಕಲ್ಪಿಸಿಕೊಂಡರೆ ನಿಮಗೆ ಗೋಚರವಾಗುವುದು ಹೇಮಚಂದ್ರಾಚಾರ್ಯರು ಎನ್ನುತ್ತಾರೆ. ಧೂಮಕೇತುಗಳು "ಶ್ರೀ ಹೇಮಚಂದ್ರರ

ವಾಸ್ತವಿಕ ಮೌಲ್ಯ ಅವರ ವಿವಿಧತೆ ಮತ್ತು ಸರ್ವದೇಶೀಯತೆಯಲ್ಲಿದೆ. ವ್ಯಾಕರಣ, ಛಂದಸ್ಸು, ಕೋಶ, ಚರಿತೆ, ಯೋಗ ಸಾಹಿತ್ಯ ಹೀಗೆ ಯಾವ ವಿಷಯಗಳ ದೃಷ್ಟಿಯಿಂದಲಾದರೂ ಸರಿ ಅಥವಾ ಸಮಗ್ರ ದೃಷ್ಟಿಯಿಂದಲಾದರೂ ಸರಿ ಅವರು ವಿಶಿಷ್ಟ ಸೇವೆ ಸಲ್ಲಿಸಿದ್ದಾರೆ. ಎಲ್ಲದರಲ್ಲೂ ಅವರ ಪ್ರತಿಭೆ ಎದ್ದು ಕಾಣುತ್ತದೆ. ಇಂಥ ಮಹಾ ಆಚಾರ್ಯರ ನಿಜವಾದ ಮೌಲ್ಯ ಕಟ್ಟಬೇಕಾದರೆ ಅನೇಕ ಮಂಡಲಿಗಳು ಆಜೀವ ಪರ್ಯಂತ ಅಭ್ಯಾಸ ಮಾಡಿದರೆ ಮಾತ್ರ ಏನಾದರೂ ತಿಳಿಯಲು ಸಾಧ್ಯವಾಗಬಹುದು'' ಎಂಬುದು ದಿವಾನ್ ಬಹದ್ದೂರ್ ಕೃಷ್ಣಲಾಲ್ ಜವೇರಿಯವರ ಅಭಿಮತ. ಡಾ| ಮುಸಲಗಾಂಕರ್ ರವರು, ಕಾಳಿದಾಸನ ಉಪಮೆ, ಭಾರವಿಯ ಅರ್ಥ ಗೌರವ, ಸಾಘಿಧನ ಅಲಂಕಾರ ಚಮತ್ಕೃತಿ, ಈ ಎಲ್ಲಾ ಗುಣಗಳೂ ಹೇಮಚಂದ್ರರ ಕೃತಿಗಳಲ್ಲಿ ಕಂಡು ಬರುತ್ತವೆ. ಅವರ ಎಲ್ಲ ಕಾವ್ಯಗಳಲ್ಲೂ ವಿಸ್ತಾರದ ಜೊತೆ ಗಂಭೀರತೆಯಿದೆ. ವೈಯಾಕರಣಿ, ಆಲಂಕಾರಿಕ, ದಾರ್ಶನಿಕ, ಸಾಹಿತ್ಯಕಾರ, ಧರ್ಮೋಪದೇಶಕ ಹಾಗೂ ಮಹಾಕವಿ - ಇವೆಲ್ಲವುಗಳ ಸಂಗಮವಾಗಿದ್ದಾರೆ ಹೇಮಚಂದ್ರರು'' ಎಂದು ಉದ್ಘೋಷಿಸಿದ್ದಾರೆ.

## ಉಪಸಂಹಾರ

ಕುಂದಕುಂದ, ಸಮಂತಭದ್ರ, ಸಿದ್ಧಸೇನ, ಹರಿಭದ್ರ, ಅಕಲಂಕ, ಜಿನಸೇನ ಇವರ ಪರಂಪರೆಯಲ್ಲಿ ಬಂದ ಮಹಾಚೇತನ ಹೇಮಚಂದ್ರರು. ಅವರು ಹಳೆಯ ಜಾಡನ್ನು ಬಿಸುಟು ಧರ್ಮದ ಜಗತ್ತಿನಲ್ಲಿ ಹೊಸ ಶಕ್ತಿಯನ್ನು, ನವ ಚೈತನ್ಯವನ್ನು ಸಂಚಾರ ಮಾಡಿಸಿದರು. ಸಮೃದ್ಧಿಯ ಜೊತೆ ಉತ್ಕೃಷ್ಟತೆಯನ್ನು ಅವರ ಸಾಹಿತ್ಯದಲ್ಲಿ ಕಾಣಬಹುದು. ಶಾಸ್ತ್ರ ಸಾಹಿತ್ಯವಲ್ಲದೆ ಭಾಷಾ ವಿಜ್ಞಾನ ಕ್ಷೇತ್ರದಲ್ಲೂ ಅವರ ಪ್ರತಿಭಾ ಸೂರ್ಯನ ಬೆಳಕು ಪ್ರಜ್ವಲವಾಗಿ ಬೆಳಗುತ್ತಿದೆ. ಇಂತಹ ಮಹಾ ಸಾಹಿತಿ, ಶಾಸ್ತ್ರಜ್ಞ, ದಾರ್ಶನಿಕ ಆಚಾರ್ಯ ಹೇಮಚಂದ್ರರಿಗಲ್ಲದೆ ಮತ್ತಾರಿಗೆ ಸಲ್ಲಬೇಕು ಕಲಿಕಾಲ ಸರ್ವಜ್ಞನೆಂಬ ಉಪಾಧಿ ?

❋ ❋ ❋

# ಗ್ರಂಥ ಋಣ


೧) ಪ್ರಬಂಧ ಚಿಂತಾಮಣಿ : ಮೇರು ತುಂಗಾಚಾರ್ಯ
ಇಂಗ್ಲೀಷ್ ಅನುವಾದ ಪ್ರೊ.ಸಿ.ಹೆಚ್. ಟಾಂನೆ

೨) ದೇಶೀನಾಮಮಾಲಾ : ಪ್ರೊ. ಬ್ಯಾನರ್ಜಿ

೩) ಗುಜರಾತ್ ಮತ್ತು ಅದರ ಸಾಹಿತ್ಯ : ಕೆ.ಎಂ. ಮುನ್ಷಿ

೪) ಗುಜರಾತಿನಲ್ಲಿ ಜೈನಧರ್ಮ : ಸಿ.ಬಿ.ಸೇಠ್

೫) ತ್ರಿಶಷ್ಠಿಶಲಾಕಾಪುರಷಚರಿತ್ರ : ಇಂಗ್ಲೀಷ್ ಅನುವಾದ ಡಾ। ಹೆಲನ್ ಎಂ.ಜಾನ್ಸನ್

೬) ಸ್ಥವಿರಾವಲಿ : ಡಾ। ಜಾಕೋಬಿ

೭) ಕಾವ್ಯಾನುಶಾಸನ : ಪ್ರೊ. ರಸಿಕಲಾಲ್ ಪಾರೀಖ

೮) ಆಚಾರ್ಯ ಹೇಮಚಂದ್ರ ಮತ್ತು ಅವರ ಶಬ್ದಾನುಶಾಸನ : ಡಾ। ನೇಮಿಚಂದ್ರ ಶಾಸ್ತ್ರಿ

೯) ಅಭಿದಾನ ಚಿಂತಾಮಣಿ : ಹರಗೋವಿಂದ ಶಾಸ್ತ್ರಿ

೧೦) ಹೇಮಚಂದ್ರರಜೀವನ : ಡಾ। ಭೂಲ್ಹರ್ ಹಿಂದಿ ಅನುವಾದ
ಮಣಿಲಾಲ್ ಪಟೇಲ್

೧೧) ಹೇಮಚಂದ್ರಾಚಾರ್ಯ : ಈಶ್ವರಲಾಲ್ ಜೈನ್

೧೨) ಆಚಾರ್ಯಹೇಮಚಂದ್ರ : ಡಾ। ವಿ.ಬಿ. ಮುಸಲಗಾಂವಕರ

೧೩) ಹೇಮಚಂದ್ರಾಚಾರ್ಯರ ಶಿಷ್ಯಮಂಡಲಿ : ಡಾ। ಭೋಗೀಲಾಲ್ ಸಾಂಡೇಸರಾ

೧೪) ಭಾರತೀಯ ಸಂಸ್ಕೃತಿಗೆ ಜೈನಧರ್ಮದ ಕೊಡುಗೆ : ಡಾ। ಹೀರಾಲಾಲ್ ಜೈನ
ಅನುವಾದ : ಮಿರ್ಜಿ ಅಣ್ಣಾರಾಯ

೧೫) ಚಾಲುಕ್ಯ ಕುಮಾರಪಾಲ : ಭಾರತೀಯ ಜ್ಞಾನಪೀಠ